ಯುಗಾದಿ ಸಂಚಿಕೆ

Regd No M 1299 "SATYAVADI" Weekly Founded 1917

ಸತ್ಯವಾದಿ

ಆರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯರಿಂದ ಪ್ರತಿಷ್ಠಿತವಾದದು

Proprietors—The Satyavadi Limited, Mysor

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—0 ‡‡ ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—0

ಸಂಪುಟ 24 ಸಂಚಿಕೆ 30] ಬುಧವಾರ 10-4-1940 ಬಿಡಿಪ್ರತಿ 3 ಕಾಸು

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕು

ಪಟ್ಟಿಗಳು

ಸರಳುಗಳು

ಕಂಬಿಗಳು

ಮೂಲೆಕಂಬಿಗಳು

ಬೇಲು ಕಟ್ಟುಗಳು

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಸತ್ಯವಾದಿ ಲಿಮಿಟೆಡ್

೫ ರೂಪಾಯಿಗಳ ಷೇರುಗಳು

ಕೆಲವು ಮಾತ್ರ ಇವೆ

ಸಂಬಳದ ಮೇಲೂ ಕಮಿಷನ್ ಮೇಲೂ

ಏಜೆಂಟರೂ ಆಗ್ರಸೈಜರೂ ಬೇಕಾಗಿದಾ

ಸತ್ಯವಾದಿ ಲೈಬ್ರರಿ

ಷೇರ್ ಮತ್ತು ಚಂದಾದಾರರು

ಇದರ ಉಪಯೋಗವನ್ನು

ಹೊಂದಬಹುದು.

ಸತ್ಯವಾದಿ ವಾರಪತ್ರಿಕೆಗೆ ಚಂದಾದಾರರಾಗಿರಿ

॥ ಶ್ರೀ ॥

ವಿಕ್ರಮ ಸಂವತ್ಸರ ಪ್ರಾರಂಭ ಶ್ರೇಯಃಪ್ರಾರ್ಥನಾ

ಶ್ರೀಮತ್ಪಂಕಜಸೀಪತಿಃ ಕುಮುದಿನೀ ಪ್ರಾಣೇಶ್ವರೋಭೂಮಿಭೂಃ ॥
ಶಾಶಾಂಕಿಃ ಸುರರಾಜವಂದಿತ ಪದೋ ದೈತ್ಯೇಂದ್ರಮಂತ್ರೀ ಶನಿಃ ॥
ನ್ವರಾಭ್ಯಸುಶ್ಚಿಬಿನಾಂ ಗಣಸ್ಸುರಪತಿಃ ಬ್ರಹ್ಮೇಶ ಲಕ್ಷ್ಮೀಧರಾಃ ।
ತಂ ರಕ್ಷಂತು ಸದೈವಯಸ್ಯ ವಿಮಲಾ ಪತ್ರೀ ಮಯಾ ಲಿಖ್ಯತೇ ॥

ಸಹಜವಾದ ವಿಕ್ರಮ ವಿನಯ, ಧರ್ಮ, ಪರೋಪಕಾರ, ಶೌರ್ಯ, ಧೈರ್ಯ, ಸುಗುಣ ಶಾಂತಿ, ಸುಖ, ಶೀಲ, ದೈವಭಕ್ತಿ, ಗುರುಜನ ವಿಧೇಯ, ಕುಟುಂಬಾದಿ ಬಂಧುಜನಾಭಿಮಾನ ನಿಗ್ರಹಾನುಗ್ರಹ, ವಿಶಿಷ್ಟ ಗುಣಭೂಷಣ, ನಿರಂತರ ಸುಖ, ಸಂತೋಷಸಂಪನ್ನ, ಶ್ರೀ ಲಕ್ಷ್ಮೀ ಕಟಾಕ್ಷ ಪರಿಪೂರ್ಣ, ದುಷ್ಟಾರಿಷ್ಟ ಗ್ರಹ ಚಾರ, ದುರ್ವ್ಯಸನರಾಹಿತ್ಯ, ವಿಕ್ರಮಾದಿತ್ಯಾಬ್ದ ಪೂರ್ಣಾಯುರಾರೋಗ್ಯದಿಂ ಕೂಡಿ ರಾಜಗೌರವಯಶೋವಂತರಾಗಿ ನಿರಂತರ ತಮ್ಮ ಶ್ರೇಯಃ ಪ್ರಾರ್ಥನಾದಿಗಳಿಂದ ತಮ್ಮ ಗೌರವಾಭಿವೃದ್ಧಿಯನ್ನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸರ್ವೇಜನಾಸ್ಸುಖಿನೋಭವಂತು ।
ಸಮಸ್ತಸನ್ಮಂಗಳಾನಿಭವಂತು ॥

ಹೆಚ್. ಎ. ಸೂರ್ಯನಾರಾಯಣಶಾಸ್ತ್ರಿ,
ಜ್ಯೋತಿಷ ವಿದ್ವಾನ್,
ಚಾಮರಿರಾಜ ಅಗ್ರಹಾರ, ಮೈಸೂರು

"ಅಕ್ಕ"

ಸಾಮಾಜಿಕ, ಭಾವಪರಿಪೂರ್ಣ ಕಥೆ

— ಲೇಖಕರು—ಜಿ. ಸದಾಶಿವಭಟ್ಟರು, ಕಕ್ಕುಂಜೆ —

(ಹಿಂದಿನ ವಾರದಿಂದ ಮುಂದುವರಿದುದು)

ಕೆನ್ನೆಲಸನ್ನು ಎತ್ತಿಕೊಂಡು ಸುರೇಂದ್ರನಾಥನು ಕನ್ನಡಕವನ್ನು ತೆಗೆದು ಅದರ ಎರಡೂ ಕನ್ನಡಿಗಳನ್ನು ಒರೆಸಿ ಒರಯ ಕಣ್ಣಿನಿಂದ ಪುಸ್ತಕವನ್ನು ನೋಡುತ್ತಿದ್ದನು.

ಮರುದಿನ ಅವನು ಕೇಳಿದನು— "ಪ್ರಮಾಳಾ! ನೀನು ಅಕ್ಕನಿಗೆ ಕಾಗದ ಬರೆಯುವುದಿಲ್ಲವೇ?

"ಇಲ್ಲ"

ಸುರೇಂದ್ರನಾಥನು ಒಂದು ಕ್ಷುದ್ರ ನಿಟ್ಟುಸಿರನ್ನು ಬಿಟ್ಟು ಮೆಲ್ಲನೆ ಹೇಳಿದನು— "ಅದ್ಹೇಗೆ!"

ಪ್ರಮಾಳೆಯು ಹೇಳಿದಳು— "ಮಾಸ್ಟರ್ ಮಹಾಶಯ! ಅಕ್ಕನು ಬಂದರೆ ಒಳ್ಳೇದಾಗುವುದಲ್ಲವೆ?"

"ಹೌದು, ಒಳ್ಳೇದಾಗುವುದು"

"ಬರೆಯಂತೆ ಬರೆಯಲೇ?"

"ಬರೆದುಬಿಡು"

"ತಮ್ಮ ವಿಷಯವನ್ನು ಬರೆಯಲೇ"

"ಬರೆದುಬಿಡು"

'ಬರೆದುಬಿಡು'—ಎಂದು ಹೇಳಲು ಅವನಿಗೆ ಯಾವ ತರಹದ ಸಂದೇಹವೂ ತೋರಿಬರಲಿಲ್ಲ. ಕಾರಣವೇನೆಂದರೆ ಅವನು ಪ್ರಪಂಚದ ಯಾವ ಮರ್ಯಾದೆಯನ್ನೂ ಬಲ್ಲವನಲ್ಲ. ಅಕ್ಕನನ್ನು ಬರಲಿಕ್ಕೆ ಒತ್ತಾಯ ಮಾಡುವುದು ತನಗೆ ಶೋಭಿಸದೆಂದು ಅವನು ಭಾವಿಸಲೇ ಇಲ್ಲ. ಯಾರಿಲ್ಲದಿರುವುದರಿಂದ ಅವನಿಗೆ ಅತ್ಯಂತ ಕಷ್ಟವಾಗುವುದೋ ಮತ್ತು ಯಾರಿಲ್ಲದಿರುವುದರಿಂದ ಅವನ ಕೆಲಸವು ನಡೆಯಲಾರದೋ ಅವಳನ್ನು ಬರಹೇಳುವುದು ಸ್ವಲ್ಪವೂ ಅಸಂಗತವೆಂದು ಅವನು ತಿಳಿಯಲಿಲ್ಲ. ಈ ಜಗತ್ತಿನಲ್ಲಿ ಯಾರಲ್ಲಿ ಕುತೂಹಲವು ಕಡಿಮೆ ಇರುವುದೋ, ಅವರು ಸಾಧಾರಣ ಮನುಷ್ಯ ಸಮಾಜದ ಹೊರಗಿರುತ್ತಾರೆ. ಯಾವ ಸಮಾಜದಲ್ಲಿ ಸಾಧಾರಣ ಜನರು ವಿಚಾರಿಸುತ್ತಾರೋ ಅವರೊಡನೆ ಅವರ ಸೇರುವಿಕೆ ಇರುವುದಿಲ್ಲ. ಸಾಧಾರಣ ಜನರ ಅಭಿಪ್ರಾಯದೊಡನೆ ಅವರ ಅಭಿಪ್ರಾಯವು ಕೂಡುವುದಿಲ್ಲ. ಕುತೂಹಲಿಯಾಗಿರುವುದು ಸುರೇಂದ್ರನಾಥನ ಸ್ವಭಾವವಾಗಿರಲಿಲ್ಲ. ತನಗೆ ಪ್ರಯೋಜನವಿದ್ದದ್ದನ್ನು ಮಾತ್ರವೇ ಅತನು ತಿಳಿಯಲಿಚ್ಛಿಸುತ್ತಿದ್ದನು. ಅದಕ್ಕಿಂತ ಹೊರಗೆ, ತನ್ನ ಇಚ್ಛೆಯಿಂದ ಆಜೆಗೆ ಒಂದು ಹೆಜ್ಜೆಯನ್ನು ಇಡಲಿಚ್ಛಿಸುತ್ತಿರಲಿಲ್ಲ. ಸಮಯವೂ ಸಿಗುವುದಿಲ್ಲ. ಆದರಿಂದಲೇ ಅವನು ಅಕ್ಕನ ವಿಷಯದಲ್ಲಿ ಅತ್ಯಂತ ಅನಭಿಜ್ಞನಾಗಿದ್ದನು. ಈ ಪರಿವಾರದಲ್ಲಿ ಇಷ್ಟು ದಿನಗಳನ್ನು ಕಳೆದನು,—ಈ ಮೂರು ತಿಂಗಳನ್ನು, ತನ್ನ ಸಮಸ್ತ ಭಾರವನ್ನೂ ಅಕ್ಕನ ಮೇಲೆ ಬಿಟ್ಟ ಅವನು ಪರಮಸೌಖ್ಯದಿಂದ ಕಳೆದನು. ಆದರೆ, ಅವನ ಮನಸ್ಸಿನಲ್ಲಿ—ಈ ಜೀವವು ಹೇಗಿದೆ? ಎಷ್ಟು ಪ್ರಾಯವಾದ್ದು? ನೋಡುವುದಕ್ಕೆ ಹೇಗಿದೆ? ಆದರಲ್ಲಿ ಏನೇನು ಗುಣಗಳಿವೆ?— ಎಂಬುದನ್ನು ತಿಳಿಯುವ ಜಿಜ್ಞಾಸೆಯೇ ಉಂಟಾಗಲಿಲ್ಲ. ಏನೂ ಅತನಿಗೆ ಗೊತ್ತಿಲ್ಲ; ತಿಳಿದುಕೊಳ್ಳಲು ಇಚ್ಛೆಯೂ ಇಲ್ಲ, ಧ್ಯಾನವೂ ಇಲ್ಲ.—ಎಲ್ಲರೂ 'ಅಕ್ಕ' ಎಂದು ಕರೆಯುತ್ತಾರೆ; ಅವನೂ 'ಅಕ್ಕ' ಎಂದು ಕರೆಯುತ್ತಾನೆ. ಎಲ್ಲರೂ ಅವಳಿಂದ ಸ್ನೇಹ ಮತ್ತು ಸಹಾಯವನ್ನು ಪಡೆಯುವರು; ಅವನೂ ಪಡೆಯುವನು. ಅವಳ ಹತ್ತಿರ ಸಮಸ್ತ ಜಗತ್ತಿನ ಭಂಡಾರವು ತುಂಬಿದೆ. ಕೇಳಿದವರ್ಗೆಲ್ಲ ಸಿಗುತ್ತದೆ. ಅದನ್ನು ಸುರೇಂದ್ರನೂ ತೆಗೆದ ಕೊಂಡಿದ್ದರೆ ಅದರಲ್ಲಿ ಆಶ್ಚರ್ಯವೇನು? ಮಳೆ ಸುರಿಸುವುದು ಮೋಡದ ಕೆಲಸ; ಸ್ನೇಹ ಮಾಡುವುದೂ, ಎಲ್ಲರ ಸಮಾಚಾರ ತಿಳಿದುಕೊಳ್ಳುವುದೂ ಅಕ್ಕನ ಕೆಲಸ. ಮಳೆ ಬರುವಾಗ ಯಾರು ಕೈನೀಡುವರೋ ಅವರಿಗೆ ನೀರು ಸಿಗುತ್ತದೆ; ಅಕ್ಕನ ಮುಂದೆ ಕೈನೀಡುವುದರಿಂದಲೂ ಅಭೀಷ್ಟ ವಸ್ತುವು ಸಿಕ್ಕಿಬಿಡುತ್ತದೆ. ಅವಳು ಮೇಘದಂತೆಯೇ ಅಂಧಳು; ಕಾಮನೆ ಮತ್ತು ಆಕಾಂಕ್ಷಾರಹಿತಳು! ಇದೆಲ್ಲವನ್ನೂ ವಿವರಿಸಿ ಅವನು ತನ್ನ ಮನಸ್ಸಿನಲ್ಲಿ ಇದೇ ಪ್ರಕಾರದ ಧಾರಣೆಯನ್ನು ಮಾಡಿಕೊಂಡಿದ್ದನು,—ಈಗಲೂ ಅದೇ ಇದೆ. ಕಾಶೀಗಮನದ ಘಟನೆಯನಂತರ ಅವನು ಅಕ್ಕನಿಲ್ಲದೆ ಒಂದು ಕ್ಷಣವೂ ತನ್ನ ಕೆಲಸವು ನಡೆಯುವುದಿಲ್ಲವೆಂದು ತಿಳಿದುಕೊಂಡಿದ್ದಾನೆ.

ಅವನು ತನ್ನ ಮನೆಯಲ್ಲಿದ್ದಾಗ ತಂದೆಯನ್ನೂ ಮಲತಾಯಿಯನ್ನೂ ಬಲ್ಲನು. ಅವರ ಕರ್ತವ್ಯವೇನೆಂದೂ ತಿಳಿದುಕೊಂಡಿದ್ದನು ಆದರೆ ಯಾವ ಅಕ್ಕನೊಡನೆಯೂ ಆಗ ಅವನಿಗೆ ಪರಿಚಯವಿದ್ದಿಲ್ಲ. ಪರಿಚಯವಾದಂದಿನಿಂದ ಅವನು ಅಕೆಯನ್ನು ಹಾಗೆಯೇ ತಿಳಿದಿದ್ದನು. ಆದರೆ ಅವನು ಮನುಷ್ಯನನ್ನು ತಿಳಿಯುತ್ತಿದ್ದಿಲ್ಲ; ಗುರುತಿಸುತ್ತಲೂ ಇದ್ದಿಲ್ಲ,— ಅವನಾದರೋ ಕೇವಲ ಹೆಸರನ್ನು ಬಲ್ಲನು; ಹೆಸರನ್ನೇ ಗುರುತಿಸುತ್ತಾನೆ. ಮನುಷ್ಯನು ಅವನಿಗೇನೂ ಅಲ್ಲ; ಹೆಸರೇ ಸರ್ವಸ್ವ!

ಜನರು ಯಾವ ಪ್ರಕಾರ ತಮ್ಮ ಇಷ್ಟದೇವತೆಯನ್ನು ಕಾಣಲಾರರೋ; ಕೇವಲ ಹೆಸರನ್ನೇ ಬರೆದಿಟ್ಟುಕೊಳ್ಳುತ್ತಾರೋ; ದುಃಖ ಮತ್ತು ಕಷ್ಟದ ಸಮಯದಲ್ಲಿ ಅದೇ ಹೆಸರಿನ ಮುಂದೆ ತಮ್ಮ ಇಡೀ ಹೃದಯವನ್ನು ಬಿಚ್ಚಿಡುತ್ತಾರೋ, ಮೊಣಕಾಲೂರಿ, ಕರುಣೆಯ ಭಿಕ್ಷೆಯನ್ನು ಯಾಚಿಸುತ್ತಾರೋ; ಕಣ್ಣುಗಳಲ್ಲಿ ನೀರು ಬಂದರೆ ಅದನ್ನು ಒರೆಸಿಕೊಂಡು ಶೂನ್ಯ ದೃಷ್ಟಿಯಿಂದ ಪ್ರಾಯಶಃ ಯಾರನ್ನೋ ನೋಡಲಿಚ್ಛಿಸುತ್ತಾರೋ, ಆದರೆ ಏನೂ ತೋರುವುದಿಲ್ಲವೋ; ಅಸ್ಪಷ್ಟಜಿಹ್ವೆಯು ಕೇವಲ ಒಂದೆರಡು ಬಾರಿ ಅಸ್ಪಟಶಬ್ದಗಳನ್ನೇ ಉಚ್ಚರಿಸಿ ನಿಂತುಹೋಗುತ್ತದೋ ಅದೇ ರೀತಿ ಸುರೇಂದ್ರನಾಥನೂ ದುಃಖ ಹೊಂದಿದಾಗ ಅಸ್ಪುಟ ರೂಪದಿಂದ "ಅಕ್ಕಾ!" ಎಂದು ಉಚ್ಚರಿಸುತ್ತಿದ್ದನು.

ಐದನೆಯ ಪರಿಚ್ಛೇದ

ಆಗ ಸೂರ್ಯೋದಯವಾಗಿದ್ದಿಲ್ಲ, ಕೇವಲ ಪೂರ್ವದಿಶೆಯು ಕೆಂಪಾಗಿದ್ದಿತು. ಪ್ರಮಾಳೆಯು ಬಂದು, ನಿದ್ರಿಸುತ್ತಿದ್ದ ಸುರೇಂದ್ರನಾಥನನ್ನು ಕರೆದಳು "ಮಾಸ್ಟರ್ ಮಹಾಶಯ!"

ಸುರೇಂದ್ರನ ಅಲಸ್ಯಪೂರ್ಣವಾದ ನೇತ್ರಗಳೆರಡೂ ತೆರೆದವು— "ಏನು ಪ್ರಮಾಳಾ?"

"ಅಕ್ಕ ಬಂದಿದ್ದಾಳೆ."

ಸುರೇಂದ್ರನಾಥನು ಎದ್ದು ಕುಳಿತುಕೊಂಡು ಪ್ರಮಾಳೆಯ ಕೈ ಹಿಡಿದುಕೊಂಡು ಹೇಳಿದನು—"ನಡೆ, ನೋಡಿಬರೋಣ."

ನೋಡುವ ಈ ಇಚ್ಛೆಯು ಯಾವ ರೀತಿಯಾಗಿ ಅವನ ಮನದಲ್ಲಿ ಉತ್ಪನ್ನವಾಯಿತೋ ಹೇಳಲಾಗುವದಿಲ್ಲ. ಇಷ್ಟು ದಿನದ ನಂತರ ಅವನು ಇವತ್ತು ಕಣ್ಣನ್ನು ತಿಕ್ಕುತ್ತಾ ಪ್ರಮಾಳೆಯ ಕೈಹಿಡಿದುಕೊಂಡು ಎಕೆ ಹೊರ್ತಟನೋ ತಿಳಿಯದು. ಮಜ್ಜಡಿಯ ಬಳಿಗೆ ಹೋಗಿ ಮೆಟ್ಟಿಲಿನ ಮೇಲೆ ಹತ್ತಿದನು. ಮಾಧವಿಯ ಕೋಣೆಯ ಎದುರು ನಿಂತುಕೊಂಡು "ಅಕ್ಕಾ" ಎಂದು ಕರೆದನು.

ಅಕ್ಕನು ಅನ್ಯಮನಸ್ಕಳಾಗಿ ಕೆಲಸಮಾಡುತ್ತಾ ಇದ್ದಳು.

ಅವನು ಹೇಳಿದನು "ಏನಕ್ಕಾ?"

"ಮಾಸ್ಟರ್ ಮಹಾಶಯ!"

ಅಷ್ಟರಲ್ಲಿ ಇಬ್ಬರೂ ಕೋಣೆಯೊಳಗೆ ಪ್ರವೇಶಿಸಿದ್ದರು. ಮಾಧವಿಯು ಥಟ್ಟನೆ ಎದ್ದು ನಿಂತು ತಲೆಯ ಮೇಲೆ ಒಂದು ಕೈಲಿ ಘೋಷಾವನ್ನೆಳೆದುಕೊಂಡು ಒಂದು ಮೂಲೆಗೆ ಸರಿದಳು. ಸುರೇಂದ್ರನಾಥನು ಹೇಳುತ್ತಲಿದ್ದನು—"ಅಕ್ಕಾ! ನಿನಗೋಸುಗ ನಾನು ಬಹಳ ಕಷ್ಟ....."

ಮಾಧವಿಯು ಘೋಷಾದ ಮರೆಯಲ್ಲಿ ಲಜ್ಜೆಯಿಂದ ನಾಲಗೆಯನ್ನು ಕಚ್ಚಿಕೊಂಡು ಮನಸ್ಸಿನಲ್ಲಿಯೇ ಹೇಳಿಕೊಂಡಳು—"ಛೀ, ಛೀ!"

"ನೀನು ಹೊರಟುಹೋದನೆಲೆ....."

ಮಾಧವಿಯು ಮನಸ್ಸಿನಲ್ಲಿಯೇ ಹೇಳಿದಳು— "ಇದೆಂತಹ ಲಜ್ಜೆಯ

— [7 ನೇ ಪುಟದಲ್ಲಿ ಮುಂದುವರಿದಿದೆ] —

ಸತ್ಯವಾದಿ

ನಮ್ರ ಪ್ರಾರ್ಥನೆ

ಮೊನ್ನೆ ಸೋಮವಾರದಿಂದ ಶ್ರೀ ವಿಕ್ರಮ ಸಂವತ್ಸರವು ಪ್ರಾರಂಭವಾಯಿತಷ್ಟೆ. ಈ ಸಂವತ್ಸರದಲ್ಲಿ ಸಕಲ ಗ್ರಹಗಳೂ ದೇಶಕ್ಕೆ ಸಕಲ ಸನ್ಮಂಗಳಗಳನ್ನು ಉಂಟುಮಾಡಲೆಂದು ನಾವು ಪ್ರಾರ್ಥಿಸುತ್ತೇವೆ.

ವಿಕ್ರಮಸಂವತ್ಸರವು ಶುಭಫಲಕೊಡಲಿ ।
ಜನರೆಲ್ಲ ಆನಂದ ಸುಖದಿಂದ ಬಾಳಲಿ ॥
ಮಿತವಾಗಿ ಮಳೆಬಂದು ಅಮಿತಬೆಳೆ ಬೆಳೆಯಲಿ ।
ವ್ಯವಸಾಯ ಉದ್ಯೋಗದಲಿ ಲಾಭಒಂಲಿ ॥
ರೋಗಬಾಧೆಗಳೊಂದು ಇಲ್ಲದೆಯೆ ಜನರೆಲ್ಲ ।
ಆರೋಗ್ಯಯುತರಾಗಿ ಸುಖವಾಗಿ ಬಾಳಲಿ ॥
ರವಿಯಾಯುರಾರೋಗ್ಯಭಾಗ್ಯಗಳ ಕೊಡಲಿ ।
ಚಂದಿರನು ಸದ್ಯಶಶ್ಚಂದ್ರಿಕೆಯ ಬೆಳಗಲಿ ॥
ಮಂಗಳನು ಸಕಲಸನ್ಮಂಗಳಪ್ರದನಾಗಿ
ಬುಧನು ಸದ್ಗುಣಬುದ್ಧಿಗಳ ಕೊಟ್ಟು ಸಲಹಲಿ ॥
ಗುರುವು ಸುಜ್ಞಾನಸುವಿಚಾರಗಳನೀಯಲಿ ।
ಭಾರ್ಗವನು ಧನಕನಕವಾಹನವೀಯಲಿ ॥
ಶನಿಯು ಸುಸ್ಥಿರವಾದ ಚಿತ್ತವನು ಧೈರ್ಯವನು ।
ಸಕಲ ಸದ್ವಿದ್ಯೆ ಬುದ್ಧಿಗಳನಿತ್ತು ಪಾಲಿಸಲಿ ॥
ತಾರೆ ಇಪ್ಪತ್ತೇಳು, ಮಾಸಗಳು ಹನ್ನೆರಡು ।
ಷಡೃತುಗಳಯನಯುಗ್ಮವು ಪಕ್ಷವೆರಡು ॥
ದೇಹದಲಿ ಶಕ್ತಿಯನು ದೇವರಲಿ ಭಕ್ತಿಯನು ।
ಜನರೊಳಗೆ ಐಕ್ಯವನು ಪ್ರೀತಿಯನು ಕೊಡಲಿ ॥
ಕರ್ನಾಟಕದೇಶದೊಡೆಯರು ನಮ್ಮ ಮೈಸೂರು ।
ಯದುವಂಶರಾಜರು ಧರೆಯೊಳಗೆ ಮೆರೆಯಲಿ ॥

ವಿಕ್ರಮ ಸಂವತ್ಸರದ ಭವಿಷ್ಯ

ಈ ವಿಕ್ರಮಸಂವತ್ಸರದಲ್ಲಿ ಚಂಪ್ರನು ರಾಜನಾಗಿರುವುದರಿಂದ ಜನರಿಗೆ, ಸೌಖ್ಯವೂ ಶಾಂತಿಯೂ, ನೆಲೆಸಿ ಬಹಳ ಅನುರಾಗವು ಹೆಚ್ಚುವುದು. ಅವನೇ ನೀರಸಾಧಿಪತಿಯಾಗಿರುವುದರಿಂದ ಸಮೃದ್ಧಿಯಾದ ಮಳೆಯಾಗಿ, ಸುಭಿಕ್ಷವು ಪ್ರಪಂಚಕ್ಕೆ ಆಗುವುದೆಂದು ಹೇಳಬಹುದು. ಆದರೆ ಶನಿಯು ಮಂತ್ರಿಯಾಗಿರುವುದರಿಂದ, ಮೇಲಿನ ಉತ್ತಮ ಫಲಗಳಿಗೆ ತೊಂದರೆಯನ್ನುಂಟುಮಾಡುವನು. ಜನಗಳಲ್ಲಿ ಪರಸ್ಪರ ಕಲಹಗಳು ತಲೆದೋರುವುವು. ವಿಪರೀತ ಭಾವನೆಯು ಹೆಚ್ಚಿ ಅದರಿಂದ ಅನರ್ಥವಾಗದಿರದು. ಸಂಪೂರ್ಣವಾದ ದುಷ್ಫಲವಿಲ್ಲ. ಈ ಶನಿಯ ಫಲವು ಮೂರನೆಯ ಒಂದುಪಾಲು. ಮಿಕ್ಕ ಭಾಗವು ಸುಖದಾಯಕವೆಂದು ರಾಜಕರು ತಿಳಿಯಬೇಕು. ಶುಕ್ರನು ಸೇನಾಧಿಪತಿ ಅರ್ಘಾಧಿಪತಿ ಮತ್ತು ಮೇಘಾಧಿಪತಿಯಾಗಿರುವುದರಿಂದ ಕಾಲಕಾಲಕ್ಕೆ ಮಳೆ ಮತ್ತು ಬೆಳೆಗಳೂ ಪಶುಗಳಿಗೆ ಸೌಖ್ಯವೂ, ಜನಗಳಿಗೆ ಆರೋಗ್ಯವೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಅಂಗಾರಕನು ಸಸ್ಯಾಧಿಪತಿಯಾಗಿರುವುದರಿಂದ ಉಷ್ಣಾಧಿಕ್ಯ ಮತ್ತು ರಾಜರಲ್ಲಿ ಕ್ರೋಧವು ಹೆಚ್ಚುವುದು. ಸೂರ್ಯನು ಧಾನ್ಯಾಧಿಪತಿಯಾಗಿರುವುದರಿಂದ ಮಧ್ಯಮ ಬೆಳೆಯೂ, ಖಂಡವೃಷ್ಟಿಯೂ, ಕೆಂವು ಧಾನ್ಯದ ಅಭಿವೃದ್ಧಿಯೂ ಆಗುವುದು. ಮತ್ತು ಕ್ಷತ್ರಿಯರಿಗೆ ಉತ್ತಮಕಾಲವೆಂದು ಹೇಳಬಹುದು. ಗುರುವು ರಸಗಳಿಗೆ ಅಧಿಪತಿಯಾಗಿರುವುದರಿಂದ ಸಸ್ಯಗಳ ಬೆಳೆವಣಿಗೆಯು ಅತ್ಯುತ್ತಮವಾಗಿ ನಡೆಯುವುದು. ಜನಗಳಲ್ಲಿ ಪರಸ್ಪರ ವಾತ್ಸಲ್ಯಾಭಿವೃದ್ಧಿಯಾಗಿ ಶಾಂತಿಯು ನೆಲೆಗೊಳ್ಳುವುದು. ಒಟ್ಟಿನಲ್ಲಿ ಅಧಿಪತ್ಯಗಳು ಶುಭಗ್ರಹಗಳಿಗೆ ಅಧಿಕವಾಗಿರುವ ಪ್ರಯುಕ್ತ ಅಶುಭ ಫಲಗಳಿದ್ದರೂ ಶುಭ ಫಲಗಳಲ್ಲಿ ಐಕ್ಯಗಳೆಂದು ತಿಳಿಯಬೇಕು. ಮೂರನೆಯ ಎರಡುಭಾಗ ಉತ್ತಮ ಫಲ. ಮೂರನೆಯ ಒಂದುಭಾಗ ಕನಿಷ್ಠ ಫಲವೆಂದು ಅಳತೆಮಾಡಿ ಹೇಳಬಹುದು. ಒಟ್ಟು ಅರವತ್ತು ವರ್ಷಗಳನ್ನು ಮೂರು ಭಾಗಮಾಡಿ ಉತ್ತಮ, ಮಧ್ಯಮ, ಕನಿಷ್ಠಗಳೆಂದು ವಿಂಗಡಿಸಿದರೆ, ವಿಕ್ರಮ ವರ್ಷವು ಉತ್ತಮದಲ್ಲಿಯೇ ಪರಿಗಣಿತವಾಗುತ್ತದೆ. ಆದರಿಂದಲೂ ಈ ವರ್ಷವು ಉತ್ತಮೋತ್ತಮವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದುವ ಸುಯೋಗವನ್ನು ದೊರಕಿಸುವ ಸಂವತ್ಸರವೆಂದರೆ ತಪ್ಪಿಸಿದು. ಅದಕ್ಕನುಗುಣವಾಗಿ, ರಾಜರು ಮೊದಲುಗೊಂಡು ಸವನಾಯಕರಿಗೆ ಅತಿಶಯವಾದ ಮಂಗಳವನ್ನು ಪ್ರಪಂಚಕ್ಕೆ ಕೊಟ್ಟು ಸಂರಕ್ಷಿಸಲಿ. "ತಥಾಸ್ತು"

ವಿಕ್ರಮಸಂವತ್ಸರದ ಭರತಖಂಡದ ಭವಿಷ್ಯವನ್ನು ಮುಂದಿನವಾರ ಪುರ್ತಿಸಲಾಗುತ್ತೆ.

ವಿದ್ವಾನ್ ಸರಸಕವಿ ಭಾರತಿ.

ವಿವಿಧ ವಿಷಯಗಳು

ಜನಾಬ್ ಜಿನ್ನಾ ಸಾಹೇಬರ ಭಾರತ ವಿಭಾಗದ ಸ್ಕೀಂ ಎಲ್ಲೆಲ್ಲೂ ಖಂಡಿಸಲ್ಪಡುತ್ತಿದೆ.

ಬೊಂಬಾಯಿನಲ್ಲಿ 14 ವರ್ಷದ ಸಿನಿಮಾ ನಟಿಯೊಬ್ಬಳನ್ನು ಪಂಜಾಬು ವಿಶ್ವವಿದ್ಯಾನಿಲಯದ ಪದವೀಧರನೊಬ್ಬನು ಹಾರಿಸಿಕೊಂಡು ಹೋಗುವಾಗ ಸಿಕ್ಕಿಬಿದ್ದು ವಿಚಾರಣೆಗೆ ಒಳಪಟ್ಟಿದ್ದಾನೆ.

ಫ್ರಾನ್ಸಿನಲ್ಲಿ ಈಗ ಐದು ಲಕ್ಷಕ್ಕಿಂತ ಹೆಚ್ಚು ಬ್ರಿಟೀಷು ಸೈನ್ಯವು ಜರ್ಮನಿಯೊಂದಿಗೆ ಯುದ್ಧಮಾಡಲು ಸಿದ್ಧವಾಗಿದೆಯೆಂದು ಜರ್ಮಬುಲ್ ಪತ್ರಿಕೆಯು ತಿಳಿಸುತ್ತದೆ.

ರಷ್ಯಾವು ಇಂಡಿಯಾದ ಮೇಲೆ ದಂಡೆತ್ತಿ ಬರುವುದಿಲ್ಲವೆಂದು ರಷ್ಯಾ ಮಂತ್ರಿಯು ಪ್ರಕಟಿಸಿರುತ್ತಾನೆ.

ರಷ್ಯಾದ ಒಂದು ಲೈಬ್ರರಿಯಲ್ಲಿ 4 ಮಿಲಿಯ ಪುಸ್ತಕಗಳಿರುತ್ತವೆಂದೂ, ಅಲ್ಲಿ ಕೂತು ಕೊಂಡು ಓದಲು 1000 ಜನರಿಗೆ ಸ್ಥಳವಿರುವುದೆಂದೂ ವರ್ತಮಾನ.

ಸುಪ್ರಸಿದ್ಧ ಓಂ ಮಂಡಲಿಯ ಸ್ಥಾಪಕರಾದ ಲೇಖರಾಜರ ಹತ್ತಿರ ಈಗ 400 ಜನ ಗಂಡಂದಿರಿಂದ ಅಸಹಕರಿಸಲ್ಪಟ್ಟ ಸ್ತ್ರೀಯರಿರುವರಂತೆ, ಶ್ರೀ ಕೃಷ್ಣನ ಅವತಾರವನ್ನೆತ್ತಿರವನೆಂದು ಹೇಳುವ ಈತನ 1ಗ 10% ಮಂದಿ ಹೆಂಡತಿಯರನ್ನು ಹೊಂದುವನಂತೆ!

ಇಟಲಿಯಲ್ಲಿ ಜರ್ಜುಗಳ ಕಬ್ಬಿಣದ ದ್ವಾರಗಳು ಕಲೆ ಅಥವಾ ಇತಿಹಾಸದ ದೃಷ್ಟಿಯಿಂದ ಬೆಲೆಬಾಳುವ ಕಬ್ಬಿಣದ ದ್ವಾರಗಳು ವೋಪರ ಅಧಿಕಾರಕ್ಕೊಳಪಟ್ಟ ದ್ವಾರಗಳು ಮತ್ತು ವಿದೇಶೀಯರಿಗೆ ಸೇರಿದ ಮನೆಗಳ ದ್ವಾರಗಳು ಇವನ್ನೆಲ್ಲ, ದೇಶದಲ್ಲಿರುವ ಇತರ ಎಲ್ಲಾ ಕಬ್ಬಿಣದ ದ್ವಾರಗಳನ್ನೂ ಸರಕಾರವು, ವಶಪಡಿಸಿಕೊಳ್ಳುವುದಕ್ಕೆ ಮಂತ್ರಿಮಂಡಲವು ನಿರ್ಧಾರ ಮಾಡಿದೆ.

ಈಗಿನ ಯುದ್ಧದಲ್ಲಿ ಬ್ರಿಟನ್ನಿನೊಡನೆ ಎಲ್ಲಾ ವಿಷಯಗಳಲ್ಲಿಯೂ ಸಹಕರಿಸುವ ಅಭಿಲಾಷೆ ಈಜಿಪ್ಟಿಗಿದೆ.

ಸತ್ಯಾಗ್ರಹವನ್ನು ಪ್ರಾರಂಭಿಸುವ ವಿಷಯದಲ್ಲಿ ಎಲ್ಲರಿಗಿಂತಲೂ ಮಹಾತ್ಮ ಗಾಂಧಿಯವರೇ ಹೆಚ್ಚು ಕುತೂಹಲರಾಗಿರವರೆಂದು ಶ್ರೀ ಲೋಹಿಯಾರವರು ಅಭಿಪ್ರಾಯಪಟ್ಟಿರುವರು.

ಶ್ರೀ ವಿಕ್ರಮನಾಮ ಸಾಂವತ್ಸರಿಕ ಮಜ್ಜಳಾಶಂಸನ ಪದ್ಯಪಂಚಕಂ

ದೊರೆಯಿಂವಿಕ್ರಮವರ್ಷದೊಳ್ ಹಿಮಕರಂ ಮಂತ್ರೀಶ್ವರಂ ಭಾನುಜಂ
ವರಸೈನ್ಯಾಧಿಪಭಾರ್ಗವಂ ತಿಳಿಯಲಾ ಸಸ್ಯಾಧಿಪಂ ಭೂಮಿಜಂ
ಉರುಧಾನ್ಯಾಧಿಪ ಭಾಸ್ಕರಂ ಭೃಗುಜತಾನರ್ಘಕ್ಕು ಮೇಣ್ ಮೇಘಕಂ
ಗುರುತಾನೀಶಸಕ್ಕೆ ನೀರಸಕೆತಾಂ ಚಂದ್ರಂ ಮಹಾನಾಯಕಂ | ೧ |

ಎಸೆವಾಚಂದ್ರಮನಿಂದೆ ಶಾಂತಿ ಶನಿಯಿಂ ಕ್ರೋಧಂ ಜನದ್ವೇಷಮುಂ
ಪೊಸತೇಂ ಭಾರ್ಗವನಿಂದೆ ವೃಷ್ಟಿ ಕುಜನಿಂದೌಷ್ಣ್ಯಂ ನೃಪಕ್ರೋಧಮುಂ
ಪುಸಿಯುಲ್ಕಾರವಿಯಿಂದೆ ಧಾನ್ಯ ಗುರುವಿಂಭಾಗ್ಯೋದಯಂ ತಾನೆನಲ್
ಏಶದಂ ವಿಕ್ರಮವತ್ಸರೇಶ ಫಲಗಳ್ ಪೇಳ್ದಂತೆ ಸಿದ್ಧಾಂತದೊಳ್ | ೨ |

ಮೊದಲಾ ಭಾಸ್ಕರ ಚಂದ್ರ ಭೌಮ ಬುಧರಂ ಮತ್ತಂ ಸುರಾಚಾರ್ಯನಂ
ಮುದದೊಳ್ ಭಾರ್ಗವ ಮಂದರಂ ಭುಜಗಜನಂ ಕೇತ್ವಾಖ್ಯನಂಶಕ್ತಸಂ | ೩ |
ಹೃದಯಾಬ್ಜಂ ನೆರೆಫುಲ್ಲವಾಗೆ ನೆಸೆಯಲ್ ಮತ್ತೇಂ ಸದಾಸೌಖ್ಯಮುಂ
ಸದಯರ್ ನೀಡುವರೆಂದೆನಲ್ ಗ್ರಹವರರ್ ಸಂಪತ್ಪ್ರದರ್ ಶಾಶ್ವತರ್ | ೪ |

ಮಳೆಯಿಂ ಮಂಗಳನಾಡಿನಿಂ ಮನುಜರಿಂ ಮತ್ತೇಭದಿಂ ಮತ್ತಮಾ
ಪೊಳೆಯಿಂ ಪಕ್ಷಿಸಮೂಹದಿಂ ಪ್ರಭುವಿನಿಂ ಪಶ್ವಾದಿಯಿಂ ಪದ್ಮದಿಂ
ಬೆಳೆಯಿಂ ಭಾಗ್ಯಸಮೃದ್ಧಿಯಿಂ ಭ್ರಮುದಿಂ ಭದ್ರಾಶ್ವದಿಂ ಭೂಮಿತಾಂ
ಕಳೆಯೇರುತ್ತೆ ಸುವಿಕ್ರಮಾಖ್ಯಶರದೊಳ್ಗಲ್ಗೆತ್ಕಲುಂ ಸರ್ವದಾ | ೫ |

ಜಯಮುಕ್ಕೀ ಜಗಕಾವಗಂ ಜಠರದೊಳ್ ಬ್ರಹ್ಮಾಂಡಮುಂ ಪೊತ್ತನಿಂ
ಜಯಮುಕ್ಕೀ ಭರತಾಖ್ಯ ಖಂಡಕನಿಶಂ ಸತ್ಪುತ್ರ ಸಂತಾನದಿಂ
ಜಯಮಕ್ಕೀ ವರಕೃಷ್ಣರಾಜನೃಪಗಂ ಚಾಮೇಂದ್ರಗುಂ ಸಂತತಂ
ಜಯಮುಕ್ಕೀಗಳು ಸತ್ಯವಾದಿಯೆಸುವಾ ಸದ್ವೃತ್ತಪತ್ರಕ್ಕುಮೇಣ್ | ೬ |

ವಿದ್ವಾಕ ಸರಸಕವಿ ಭಾರತಿ.

ಶ್ರೀ ವಿಕ್ರಮ ಸಂವತ್ಸರದ ವಿಶೇಷವೇನು ?

ಈ ವಿಕ್ರಮ ಸಂವತ್ಸರದ ಜೇಷ್ಠ ಶುಕ್ಲ ಪಕ್ಷದಲ್ಲಿ ಹದಿಮೂರೇ ದಿನಗಳು ಬಂದಿರುವುದೊಂದು ವಿಶೇಷವಾಗಿದೆ. ಇಂತಹ ಪ್ರಸಕ್ತಿಯು ಘಟಿಸುವುದು ಬಹಳ ಅಪೂರ್ವ. ಈ ರೀತಿ ಸಂಭವಿಸುವುದು ಉತ್ಪಾತ ಸೂಚಕವು, ಈ ವಿಷಯವನ್ನು ಜೋತಿರ್ನಿಬಂಧದಲ್ಲಿ ಹೀಗನ್ನುತ್ತಾರೆ— ' ಪಕ್ಷಸ್ಯಮಧ್ಯೇಽದ್ವಿತಿಥೀಪತೇ ತಾಂ ತದಾ ಭವೇದ್ಗೌರವಕಾಲಯೋಗಃ ॥ ಪಕ್ಷೇ ವಿನಷ್ಟೇ ಸಕಲಂ ವಿನಶ್ಯತಿತ್ಯಾಹುರಾಚಾರ್ಯವರಾಸ್ಸಮಸ್ತಾಃ ॥ " ತ್ರಯೋದಶದಿನೇ ಪಕ್ಷೇ ತಥಾ ಸಂಹರತೇ ಜಗತ್ । ಅಪಿ ವರ್ಷಸಹಸ್ರೇಣ ಕಾಲಯೋಗಃ ಪ್ರಕೀರ್ತಿತಃ ॥ " ಒಂದು ಪಕ್ಷಕ್ಕೆ ೨ ತಿಥಿಗಳು ಲೋಪವಾದರೆ ಸಾಮಾನ್ಯವಾಗಿ ಇಡೀ ವರ್ಷವೇ, ವಿಶೇಷತಃ ಆ ಪಕ್ಷವು ದುಷ್ಟವಾಗುವುದು. ಈ ಕಾಲದಲ್ಲಿ ಸಕಲ ವಸ್ತುಗಳಿಗೆ ನಾಶವೂ ಜನಕ್ಷಯವೂ ಉಂಟಾಗುವುದು. ಮತ್ತು ಮಹಾಭಾರತದಲ್ಲಿ ಭೀಷ್ಮಾಚಾರ್ಯರು ಕೌರವನನ್ನು ಕುರಿತು ಹೀಗೆಂದಿರುವರು— ' ಚತುರ್ದಶೀಂ ಪಂಚದಶೀಂ ಭೂತಪೂರ್ವಾಂ ಚ-ಷೋಡಶೀಮ್ । ಇಮಾಂ ತ್ವಮಭಿಜಾನೇಽಹಮಮಾವಾಸ್ಯಾಂ-ತ್ರಯೋದಶೀಮ್ " ೧೪. ೧೫. ೧೬ ದಿನಾತ್ಮಕಗಳಾದ ಪಕ್ಷವನ್ನು ನಾನು ಕಂಡಿರುವೆನು. ಈಗಪ್ರತಿಸದಾದಿಯಿಂದ ಅಮಾವಾಸ್ಯೆಯೊಳಗೆ ೧೫ ದಿನಗಳು ಬಂದಿರುತ್ತವೆ, ಇದನ್ನು ನಾನು ಈವರೆಗೂ ಕಂಡಿಲ್ಲ. ಇದೊಂದು ಲೋಕಾನಿಷ್ಟಕಾರಕವಾಗಿಯೂ ಮಹೋತ್ಪಾತಸೂಚಕವಾಗಿಯೂ ಇರುವುದು. ಇದರಿಂದ ಕುರು—ಪಾಂಡವರ ಸೈನ್ಯಕ್ಷಯ ನಿಮಿತ್ತವು ಸೂಚಿಸುತ್ತದೆಂದಿರುವರು.

ಆದಕಾರಣ ಈ ಅವಧಿಯಲ್ಲಿ ಲೋಕದಲ್ಲಿ ಮಹತ್ತರವಾದ ಬದಲಾವಣೆಗಳೂ ಜನನಾಶಕಾರಿಯಾದ ಕ್ರಾಂತಿಯೂ ತಲೆದೋರುವುದು. ವಿಶೇಷವಾಗಿ ಭರತಖಂಡಕ್ಕೆ ತುಂಬಾ ಹಾನಿಯಿದೆ. ಇದಕ್ಕೆ ಅನುಕೂಲವಾಗಿ ಶನೈಶ್ಚರನೂ ಕೂಡ ನೀಚಸ್ಥಾನವಾದ ಮೇಷರಾಶಿಯಲ್ಲಿರುವನು. ಈ ಎರಡೂ ಕಾರಣಗಳಿಂದ ಲೋಕದಲ್ಲಿ ಈಗಿನ ಸ್ಥಿತಿಗಿಂತಲೂ ಅತ್ಯಂತ ಭಯಂಕರವಾದ ಪರಿಸ್ಥಿತಿಯು ಒದಗಿ ಜನತೆಯಲ್ಲಿ ಹಾಹಾಕಾರವೇಳುವುದು. ಆದರೂ ಇದ್ದುದರಲ್ಲಿ ಆಶಾಜನಕವಾದ ಸಂಗತಿಯೆಂದರೆ ಬೃಹಸ್ಪತ್ಯಾಚಾರ್ಯರು ಇದೇ ಸಂವತ್ಸರದ ಜ್ಯೇಷ್ಠ ಶು॥ ೯ ದಿನ ಮೀನರಾಶಿಯನ್ನು ಬಿಟ್ಟು ಮೇಷಕ್ಕೆ ಪ್ರವೇಶಿಸುವರು. ಈ ಸಂಸರ್ಗದಿಂದ ಶನಿಯ ದೋಷವು ಬಹಳ ಕಡಿಮೆಯಾಗಿ ಲೋಕಾನುಭವಕ್ಕೆ ಬಾರದೆ ಹೋದರೂ ಈ ತ್ರಯೋದಶದಿನಸಪಕ್ಷದ ಉತ್ಪಾತಗಳು ಶಾಂತವಾಗುವಂತಿಲ್ಲ.

" ಅಕ್ಕ " ಕಥೆ [2 ನೇ ಪುಟದಿಂದ ಮುಂದುವರಿದಿದೆ]

ಷಯ !" ಆಮೇಲೆ ಪ್ರಕಟವಾಗಿ ಹೇಳಿದಳು—" ಪ್ರಮಿಳಾ ! ಮಾಸ್ಟರ್ ಮಹಾಶಯರ ಹತ್ತಿರ ಹೊರಗೆ ಹೋಗಲು ಹೇಳು. '

ಪ್ರಮಿಳೆಯು ಚಿಕ್ಕವಳಾದರೂ ಅಕ್ಕನ ಈ ಸ್ಥಿತಿಯನ್ನು ನೋಡಿ ಈ ಕೆಲಸವು ಸರಿಯಾಗಲಿಲ್ಲವೆಂದು ತಿಳಿದು ಹೇಳಿದಳು—" ನಡೆಯಿರಿ, ಮಾಸ್ಟರ್ ಮಹಾಶಯ ! "

ಮೊದಲಾದರೋ ಸ್ವಲ್ಪ ಹೊತ್ತಿನವರೆಗೆ ಸುರೇಂದ್ರನು ಅಪ್ರತಿಭನಂತೆ ನಿಂತಿದ್ದನು. ಕೂನೆಗೆ " ನಡೆ " ಎಂದು ಹೇಳಿದನು. ಅವನು ಹೆಚ್ಚು ಮಾತಾಡಲು ತಿಳಿಯುತ್ತಲೂ ಇದ್ದಿಲ್ಲ; ಹೆಚ್ಚು ಮಾತಾಡಲು ಅಪೇಕ್ಷಿಸುತ್ತಲೂ ಇದ್ದಿಲ್ಲ; ದಿನವಿಡೀ ಮೇಘದ ಮರೆಯಲ್ಲಿದ್ದು ಆನಂತರ ಯಾವಾಗ ಸೂರ್ಯನು ತೋರುತ್ತಾನೋ, ಆಗ ಹೇಗೆ ಥಟ್ಟನೆ ಎಲ್ಲರೂ ಅವನ ಕಡೆಗೆ ನೋಡುತ್ತಾರೋ ಮತ್ತು ಕ್ಷಣಹೊತ್ತಿನವರೆಗೆ ಸೂರ್ಯನ ಕಡೆಗೆ ನೋಡಬಾರದು, ಅಥವಾ ಅವನ ಕಡೆಗೆ ನೋಡಿದರೆ ಕಣ್ಣುಗಳಿಗೆ ಪೀಡೆಯಾಗುತ್ತದೆ, ಎಂಬ ಧ್ಯಾನವೇ ಹೇಗೆ ಇರುವುದಿಲ್ಲವೋ, ಹಾಗೆಯೇ ಒಂದು ಮಾಸದವರೆಗೆ ಮೇಘಾವೃತನಾದ ಆಕಾಶದ ಕೆಳಗಿದ್ದು ಮೊದಲನೇ ಸಾರಿ ಸೂರ್ಯನುದಯಿಸಿದ ಕೂಡಲೇ ಸುರೇಂದ್ರನಾಥನು ಪರಮ ಪ್ರಸನ್ನತೆಯಿಂದ ಅವನನ್ನು ನೋಡಲೋಸುಗ ಹೋಗಿದ್ದನು. ಆದರೆ ಅದರ ಪರಿಣಾಮವು ಹೀಗಾಗುವುದೆಂದು ಅವನು ತಿಳಿದಿರಲಿಲ್ಲ.

ಸಿಲ್ಟ್ ದ್ವೀಪದ ಬಳಿ ಮತ್ತೆ ಬ್ರಿಟಿಷ್ ಬಾಂಬರ್ ವಿಮಾನಗಳು 25 ಬಾಂಬುಗಳನ್ನು ಹಾಕಿದ್ದು ನಿಜವೆಂದು ಜರ್ಮನ್ ವಾರ್ತಾ ಸಂಸ್ಥೆಯು ಒಪ್ಪಿಕೊಂಡಿದೆ.

o o o

ಉತ್ತರ ಸಮುದ್ರದ ಮೇಲೆ ಶೋಧನಾಕಾರ್ಯ ನಡೆಸಲು ರಾಯಲ್ ಏರ್ ಫೋರ್ಸ್ ವಿಮಾನಗಳು ಹೋಗಿ ಶತ್ರುಗಳ ಮೇಲೆ ಧಾಳಿ ಸಿದವು. ಆಗ ಎದುರಾದ ಶತ್ರುವಿಮಾನವೊಂದರೊಡನೆ ಹೋರಾಡಿ. ಅದನ್ನು ಜಖಂಗೊಳಿಸಲಾಯಿತು. ಈ ವಿಮಾನಗಳ ಅವಶೇಷಗಳು ಆಮೇಲೆ ಯುದ್ಧ ಜಹಜೊಂದಕ್ಕೆ ಕಾಣಿಸಲಾಯಿತು. ಒಂದು ವಿಮಾನ ಮಾತ್ರ ನಷ್ಟವಾಯಿತು.

ವಾರಭವಿಷ್ಯ

ಜ್ಯೋತಿಷ್ಯರ್ — ಕೃಷ್ಣಾಪುರದ
ತೇಟ್ಲೂರು ವೆಂಕಟನರಸಿಂಹಾಚಾರ್
ಬೃಹಸ್ಪತಿ ಜ್ಯೋತಿಷಾಲಯ,
ಹಳೇ ಪೋಸ್ಟಾಫೀಸು ರೋಡು, ಮೈಸೂರು

ತಾ || 10—4—40 ರಿಂದ 16—4—40 ರವರಿಗೆ

ಮೇಷ

ತಾ. 13. 14, 15 ಅನುಕೂಲ ದಿನಗಳಾಗಿವೆ. ದೇವತಾಗುರುಸೇವಾ, ಇಷ್ಟಕಾರ್ಯಸಿದ್ಧಿ, ಗೃಹಕೃತ್ಯಾನುಕೂಲತೆ, ಬಂಧುಮಿತ್ರ ಸಮಾಗಮ, ಸುಖ, ಆರೋಗ್ಯ. ತಾ. 11, 12, 16 ವ್ಯಯಾಧಿಕ, ಭೃತ್ಯವಿರೋಧ, ಸಾಲ ತಗಾದೆ, ಚಂಚಲತೆ. ಬನ್ನೀಮರದ ಪ್ರದಕ್ಷಣೆ ಮಾಡುವುದು ಉತ್ತಮ.

ವೃಷಭ

ತಾ. 10, 13, 14 ಗೃಹದಲ್ಲಿ ಮನಸ್ತಾಪ ವ್ಯಯಾಧಿಕ. ಉತ್ಸಾಹ ಕಡಮೆ. ಬಂಧುವಿರೋಧ. ಅನಾರೋಗ್ಯ. ತೊಗರೀ ಬೇಳೆ ದಾನಮಾಡುವುದು ಉತ್ತಮ. ತಾ. 11, 12, 15, 16 ಆರೋಗ್ಯ. ಜಯಪ್ರದ, ಇಷ್ಟಸಿದ್ಧಿ, ಗೃಹಕೃತ್ಯಾನುಕೂಲತೆ. ಶುಭೋದಯ, ಜನರಲ್ಲಿ ಮನ್ನಣೆ, ಉತ್ಸಾಹ. ಕೀರ್ತಿ.

ಮಿಥುನ

ತಾ. 10, 11, 14, 15 ಪುಣ್ಯಕಾರ್ಯಸಿದ್ಧಿ. ಮಹಾತ್ಮ ಸೇವಾಫಲ. ದೊಡ್ಡವರಲ್ಲಿ ಗಣ್ಯತೆ, ಉತ್ಸಾಹ. ಶುಭೋದಯ. ಲಾಭಕಾರ್ಯ ಶತ್ರು ಜಯ. ಗೃಹಾಭಿವೃದ್ಧಿ. ಕೀರ್ತಿ. ತಾ. 12, 13, 16 ಚಂಚಲತೆ, ವ್ಯಯಾಧಿಕ. ಯತ್ನಕಾರ್ಯ ಭಂಗ. ಸಂಚಾರಾಧಿಕ. ಅನಾರೋಗ್ಯ. ನಿಷ್ಠೂರ. ಬ್ರಹ್ಮಚಾರಿಗೆ ವಸ್ತ್ರ, ಹಾಲು ದಾನಮಾಡಿ ಕ್ಷೇಮ.

ಕರ್ಕಾಟಕ

ನಿಮಗೆ ಜನರಲ್ಲಿ ಗಣ್ಯತೆ. ಕಾರ್ಯದಲ್ಲಿ ದಕ್ಷತೆ. ಉತ್ಸಾಹ. ಕೀರ್ತಿ. ಶುಭವಾರ್ತಾಧಿಕ ಮಹಾತ್ಮರ ಸೇವಾ ಸ್ವಪರ ಜನಸಹಾಯ. ಲಾಭಕಾರ್ಯ. ಬಂಧು ಪ್ರೀತಿ ಉತ್ತಮವಾಗಿರುತ್ತೆ. ತಾ. 14, 15 ವ್ಯಯಾಧಿಕ. ಕಲವರಲ್ಲಿ ನಿಷ್ಠೂರ ಭಾಷಣ. ಚಂಚಲತೆ.

ಸಿಂಹ

ಈ ವಾರ ನಿಮಗೆ ಕಾರ್ಯಾನುಕೂಲತೆ ಉತ್ತಮವಾಗಿರುತ್ತೆ. ಮಾನಮರ್ಯಾದೆ. ಯಶಸ್ಸು ಕೀರ್ತಿ ಶುಭವಾರ್ತಾಧಿಕ. ಗೃಹಕೃತ್ಯಾನುಕೂಲತೆ. ಬಂಧುಮರ್ಯಾದೆ. ದೇವತಾ ಗುರು ಸೇವಾ. ರಾಜಕೀಜನರಿಂದ ಯಶಸ್ಸು ಇದೆ. ತಾ. 13, 15, 16 ಸಂಸಾರಾಧಿಕದಿಂದ ವ್ಯಯಾಧಿಕ. ಅನಾರೋಗ್ಯ. ಕೆಲವರಲ್ಲಿ ಮನಸ್ತಾಪ. ಗೋಪೂಜೆ ಮಾಡಿ ಕ್ಷೇಮ.

ಕನ್ಯಾ

ತಾ. 10, 11, 12 ವ್ಯಯಾಧಿಕ. ಜನರಲ್ಲಿ ನಿಷ್ಠೂರ. ಬಂಧುವಿಗೆ ತೊಂದರೆ. ಸಾಲದ ತಗಾದೆ. ಶುಭಕಾರ್ಯದಲ್ಲಿ ಮನಸ್ತಾಪ ಧರ್ಮಭಂಗ. ಸರ್ಕಾರಿ ಕಾರ್ಯ ಮುಂದುವರಿಸುವಿಕೆ. ಹುತ್ತಕ್ಕೆ ಹಾಲುಬಿಡಿ ಕ್ಷೇಮ. ತಾ. 13, 14, 15, 16 ಆರೋಗ್ಯಕಾರ್ಯದಲ್ಲಿ ಉತ್ಸಾಹ ಲಾಭಕಾರ್ಯ ಸ್ವಪರ ಜನಸಹಾಯ. ಉತ್ತಮ. ಧರ್ಮ ವೃದ್ಧಿ. ದೇವತಾಗುರುಸೇವಾ. ಫಲ, ಉತ್ತಮ.

ತುಲಾ

ತಾ 11, 12, 13, 14 ಅನಾರೋಗ್ಯ. ಸಂಚಾರದಲ್ಲಿ ಅಸುಖ ಬಂಧುವಿರೋಧ ಸಮುದಾಯ ಕಾರ್ಯದಲ್ಲಿ ನಿಷ್ಠೂರ. ವ್ಯಯಾಧಿಕ. ಸರ್ಕಾರಿ ಕಾರ್ಯ ಮುಂದುವರಿಸುವಿಕೆ. ಅಪ್ತರಿಗೆ ತೊಂದರೆ. ತೊಗರಿ ಬೇಳೆ ವಸ್ತ್ರಸಹಿತ ದಾನಮಾಡಿ ಕ್ಷೇಮ. ತಾ. 10, 15, 16 ಕಾರ್ಯದಲ್ಲಿ ದಕ್ಷತೆ. ಆರೋಗ್ಯ ಕೀರ್ತಿ. ಲಾಭ. ಜನರಲ್ಲಿ ಗಣ್ಯತೆ. ದೇವತಾಗುರುಸೇವಾ ಶುಭೋದಯ. ಬಂಧು ಮನ್ನಣೆ ಉತ್ಸಾಹ.

ವೃಶ್ಚಿಕ

ತಾ. 10, 11, 12, 13 ಶುಭವಾರ್ತೆ. ಬಂಧುಭಾಗ್ಯ. ಲಾಭಕಾರ್ಯದಲ್ಲಿ ಉತ್ಸಾಹ. ಗೃಹಕೃತ್ಯಾನುಕೂಲತೆ ಸುಖ. ರಾಜಕೀಜನರಿಂದ ಕಾರ್ಯಸಿದ್ಧಿ. ಸ್ವಪರ ಜನಸಹಾಯ. ಕೀರ್ತಿ. ತಾ 14, 15, 16 ಸ್ವಕೀಯರಲ್ಲಿ ಮನಸ್ತಾಪ. ವ್ಯಯಾಧಿಕ. ಸಂಚಾರದಿಂದ ಅನಾರೋಗ್ಯ ಕಾರ್ಯಭಂಗ. ಚಂಚಲತೆ. ದನಗಳಿಗೆ ಹುರಳಿ ಕೊಡಿ ಕ್ಷೇಮ.

ಧನು

ಈ ವಾರ ನಿಮಗೆ ಸ್ವಪರ ಜನಸಹಾಯ. ಗೃಹಕೃತ್ಯಾನುಕೂಲತೆ. ಶುಭಕಾರ್ಯ. ಬಂಧು ವಿಶ್ವಾಸ. ಲಾಭಕಾರ್ಯ. ರಾಜಕೀಜನರಿಂದ ಸೌಖ್ಯ. ದೇವತಾಗುರುಸೇವಾ ಉತ್ಸಾಹ. ಕೀರ್ತಿ. ತಾ. 15, 16 ರಲ್ಲಿ ನಿಷ್ಠೂರ ಭಾಷಣ. ಚಂಚಲತೆ. ವ್ಯಯಾಧಿಕ. ಎಳ್ಳು ದಾನಮಾಡಿ ಕ್ಷೇಮ.

ಮಕರ

ಈ ವಾರ ನಿಮಗೆ ಸ್ವಪರಜನಸಹಾಯ. ಗೃಹಕೃತ್ಯಾನುಕೂಲತೆ, ಶುಭಕಾರ್ಯ. ಬಂಧು ವಿಶ್ವಾಸ. ಲಾಭಕಾರ್ಯ. ರಾಜಕೀಜನರಿಂದ ಸೌಖ್ಯ. ದೇವತಾಗುರುಸೇವಾ. ಉತ್ಸಾಹ. ಕೀರ್ತಿ. ತಾ. 15, 16 ರಲ್ಲಿ ನಿಷ್ಠೂರ ಭಾಷಣ. ಚಂಚಲತೆ. ವ್ಯಯಾಧಿಕ. ಎಳ್ಳು ದಾನಮಾಡಿ ಕ್ಷೇಮ.

ಕುಂಭ

ತಾ. 10, 11, 12 ವ್ಯಯಾಧಿಕ. ಆಪ್ತೇಷ್ಟರ ವಿರೋಧ. ಸಾಲದ ತಗಾದೆ ಸಂಚಾರದಲ್ಲಿ ಅನಾರೋಗ್ಯ. ಬಂಧುಜನರಿಗೆ ತೊಂದರೆ ಶುಭಕಾರ್ಯದಲ್ಲಿ ಮನಸ್ತಾಪ. ದೇವಸ್ಥಾನದಲ್ಲಿ ವೆಡೆಸರನ್ನ ಮಾಡಿಸಿ ಕ್ಷೇಮ. ತಾ 13, 14, 15, 16 ಕಾರ್ಯದಲ್ಲಿ ದಕ್ಷತೆ. ದೇವತಾಗುರು ಸೇವಾ. ಗೃಹಕೃತ್ಯಾನುಕೂಲತೆ. ಶುಭೋದಯ. ಬಂಧುಪ್ರೀತಿ. ರಾಜಕೀಜನರಿಂದ ಕ್ಷೇಮ. ಉತ್ಸಾಹ ಕೀರ್ತಿ.

ಮೀನ

ನಿಮಗೆ ಕಷ್ಟಫಲ ಪರಿಹಾರವಾಗಿ ಶುಭ ಕಾಲ ಪ್ರಾಪ್ತವಾಗಿರುತ್ತೆ. ಇಷ್ಟಕಾರ್ಯಾನುಕೂಲತೆ ದೇವತಾಗುರುಸೇವಾ, ಕಾರ್ಯದಲ್ಲಿ ದಕ್ಷತೆ, ರಾಜಕೀಯ ಜನರಿಂದ ಮರ್ಯಾದೆ, ಸಾಲ ನಿವಾರಣೋಪಾಯ, ಬಂಧು ಪ್ರೀತಿ, ಯಶಸ್ಸು ಉತ್ತಮವಾಗಿರುತ್ತೆ. ಆದಾಗ್ಯೂ ಗೋಪೂಜೆ ತಪ್ಪದೆ ಮಾಡಿ ಉತ್ತಮಫಲವಿರುತ್ತೆ.

ಸಂದೇಶ

ಕನ್ನಡ ರಾಷ್ಟ್ರೀಯ ವಾರಪತ್ರಿಕೆ

ಬೆಳಗಾವಿ

ಪ್ರತಿ ಶುಕ್ರವಾರ ಹೊರಡುವದು

ವಾರ್ಷಿಕ ಚಂದಾ ಸ್ಥಳದವರಿಗೆ ರೂ. 1—8—0
,, ಪರಸ್ಥಳದವರಿಗೆ ರೂ. 2—5—0

ಮನೆ ಮತ್ತು ಸೈಟುಗಳನ್ನೂ
ಸರ್ಕಾರಿ ಸಾಲದಪತ್ರ ಮತ್ತು
ಕಂಪೆನಿ ಷೇರುಗಳನ್ನೂ
ಕೊಂಡುಕೊಳ್ಳುತ್ತೇನೆ ಮತ್ತು ಮಾರುತ್ತೇನೆ.
ಬೇಕಾದವರು ತಿಳಿಸಬಹುದು.

ಸತ್ಯವಾದಿ ಲಿಮಿಟೆಡ್,
ಚಾಮರಾಜಪುರಂ, ಮೈಸೂರು.

ವಿನೋದ ಲಹರಿ

ಶಾಸ್ತ್ರಿಗಳು ನಿಮ್ಮದು ಯಾನ ಊರಯ್ಯ ?

ಕಿಲಾಡಿ ಹುಡುಗ— ನಮ್ಮದು ಕಾಲು ಜಾರಿದರೆ ಕೈ ಯೂರು.

ಂ ಂ

ಧಾರವಾಡದವ—ಕನ್ನಡಿಯಲ್ಲಿ (ಕನ್ನಡ ಭಾಷೇ) ಹೇಳಿದರೆ ಗೊತ್ತಾಗುತ್ತಿರಿ.

ವಿದ್ಯಾರ್ಥಿ— ಕನ್ನಡಿಯಲ್ಲಿ ಹೇಳುವುದಕ್ಕೆ ಹೇಗೆ ಆಗುತ್ತರಿ. ಕನ್ನಡಿಯಲ್ಲಿ ಮುಖ ಕಾಣಿಸುತ್ತದೆ,

ಂ ಂ

ಉಪಾದ್ಯಾಯ—ಭಾನುವಾರ ರಜಾ ಏಕೆ ಕೊಡುವುದು ಗೊತ್ತಿದೆಯೋ ?

ಕಿಲಾಡಿ ಕಿಟ್ಟು— ಗೊತ್ತು, ಮೇಷ್ಟ್ರು ನಮ್ಮ ಎದುರಿಗೆ ಹಗಲೆಲ್ಲಾ ಬಡು ಕೊಂಡು. ಸಾಕಾಗಿ ಭಾನುವಾರ ಚಕ್ಕರ್ ಕೊಡುತ್ತಾರೆ. ಅದಕ್ಕೋಸ್ಕರ ರಜಾ.

ಂ ಂ

ಪ್ರೇಕ್ಷಕ—ಇವತ್ತಿನ ಫುಟ್‌ಬಾಲ್ ಮ್ಯಾಚ್ ಯಾರು ಯಾರಿಗರಿ?

ಹತ್ತರವ್ವಿದವ—. ಕಾಲಿಗೂ ಬಾಲಿಗೂ.

ಂ ಂ

ಅವರು— ಇಟಲಿ ಮುಸೋಲನಿ ಅಬಿಸೀನಿಯಾವನ್ನು ನುಂಗಿ ಬಿಟ್ಟ.

ಇವರು— ಅವನ ಗಂಟಲು ಹೇಗೆ ಹಿಡಿಯಿತರಿ !

ಂ ಂ

ಉಪಾದ್ಯಾಯ — ಪ್ರಪಂಚದಲ್ಲೆಲ್ಲಾ ಅತಿಉದ್ದವಾದ ನದಿ ಯಾವದೊ ?

ವಿದ್ಯಾರ್ಥಿ— (ಏನೂ ಹೊಳಯಲಿಲ್ಲ) ಯಾವುದು ಉದ್ದವಾಗಿದೆಯೊ ಅದೇ ಸಾರ್.

ಂ ಂ

ಉಪಾದ್ಯಾಯ— ನಾಳೆ ನಿಮಗೆ ಟೆಸ್ಟ ಮಾಡುತ್ತೇನೆ ಓದಿಕೊಂಡು ಬನ್ನಿ.

ವಿದ್ಯಾರ್ಥಿ—ನಾಳೆ ನಿಮ್ಮ ಪಿರೀಡಗೆ ರಜಾ ಬೇಕು ಸಾರ್.

ಮೆಜೆಸ್ಟಿಕ್ ಕನ್ನಡ ಕಾಂಪಿಟೇಷ್ ನಂ 4 ರ ಉತ್ತರ.

ಬಿ. ಎ. ಬಿ. ಎ. ಬಿ. ಬಿ. ಬಿ. ಬಿ. ಬಿ. ಎ. ಪ. ಎ.

ಬಹುಮಾನ ಪಡೆದವರ ಹೆಸರನ್ನು ಮುಂದಿನವಾರದ ಸತ್ಯವಾದಿ ಪತ್ರಿಕೆಯಲ್ಲಿ ಪ್ರಕಡಿಸಲಾಗತ್ತೆ.

ಆನಂದವಿಹಾರ ನಂ. 2

ಎಡದಿಂದ ಬಲಕ್ಕೆ— 1 ಶ್ರೀ ರಾಮ. 3 ಸದರ. 5 ತವರ. 7 ತಮ. 9 ಮೂಕ 10 ಮುದ್ದು. 11 ದೋಷ.. 12 ಕಾಂತೆ. 14 ಕವಿ. 16 ಸಂಗರ. 18 ನಡತೆ. 19 ವಿಭೇದ.

ಮೇಲಿನಿಂದ ಕೆಳಕ್ಕೆ — 1 ಶ್ರೀ ಕಾಂತ. 2 ಮತ. 3 ಸರ 4 ರಕ್ಷಕ 6 ವರ್ಣ 8 ಮಮತೆ. 9 ಮೂಷಕ. 10 ಕಾಂಚನ 13 ಯೋಗ. 15 ವಿನೋದ. 16 ಸಂತೆ. 17 ರವಿ.

ಬಹುಮಾನ ಪಡೆದವರ ಹೆಸರನ್ನು ಮುಂದಿನವಾರ ಪ್ರಕಟಿಸಲಾಗುತ್ತೆ.

ಆಫೀಸರ್— ನಿನ್ನೆ ನೀನು ಆಫೀಸಿಗೆ ಬರದೆ ಇದ್ದದಕ್ಕೆ ಎರಡು ರೂ ಫೈನ್ ಹಾಕಿದ್ದೇನೆ.

ಗುಮಾಸ್ತ— ತಾವು ಮೊನ್ನೆ ಮೂರು ದಿವಸ ಬರಲಿಲ್ಲವಲ್ಲ ಸಾರ್

ಎಸ್. ರಾಮಕೃಷ್ಣ

ಂ ಂ

ಯಜಮಾನ— ಲೋ ಎಮ್ಮೆ ಗಿಡ ತಿಂದಿತಲ್ಲೊ.

ಸಿದ್ದ—ಗಿಡತಿನ್ನಲಿಲ್ಲ ಎಲೆ ತಿಂದಿತು

ಂ ಂ

ನ್ಯಾಯಾಧೀಶ—ನಿನ್ನ ಕಡೆ ಸಾಕ್ಷಿ ಗಳಿದ್ದಾರೋ ?

ಕಳ್ಳ ಏನು ಕಳ್ಳರು ಸಾಕ್ಷಿಗಳಸಂಗಡ ಕದಿಯವುದಕ್ಕೆ ಹೋಗುತ್ತಾರೋ ?

— ಂ ಂ

ಗಿರಾಕಿ— ಈ ಬಿ ಸ್ಕತ್ತು ಪೆಟ್ಟಿಗೆ ಮುಚ್ಚಲ ತೆಗೆಯುವುದು ಹೇಗೆ ?

ಅಂಗಡಿಯವ— ಇನ್‌ಸ್ಪ್ರಕ್ಷನ್ ಪೆಟ್ಟಿಗೆ ಒಳಗಿದೆ. ಎಂ. ಎ. ನಾರಾಯಣ.

ಂ ಂ

ಸತ್ಯವಾದಿ ವಾರಪತ್ರಿಕೆಗೆ ಚಂದಾದಾರರಾಗಿರಿ.

ವರ್ತಮಾನ ಸಂಗ್ರಹ

'ಡೋಮಾಲ್ಲಾ' ಹಡಗಿನಲ್ಲಿದ್ದ 81 ಮಂದಿ ಭಾರತೀಯರನ್ನೂ ಕೂಡ ಜರ್ಮನರು ಸಮುದ್ರದಲ್ಲಿ ಮುಳುಗಿಸಿದರು. ಜರ್ಮನಿಯು ಎಂತಹ ನಿಕೃಷ್ಟವಾದ ಕೆಲಸವನ್ನು ಮಾಡಲೂ ಹಿಂತೆಗಿಯುವದಿಲ್ಲವೆಂದು ಊಹಿಸಬಹುದೆಂದು ಪತ್ರಿಕೆಗಳು ತಿಳಿಸುತ್ತವೆ.

1752 ರಿಂದ 2752 ರವರೆಗೂ ಉಪಯೋಗವಾಗುವ ಹೊಸಬಗೆಯ ಪಂಚಾಂಗವನ್ನು ಶ್ರೀ ಸೂಕ್ತಮಲ್ ಜೈನ್ ರವರು ರಚಿಸಿರುವರು. ಇವರು ಎಸ್. ಐ. ಆರ್. ರೈಲ್ವೆ ಲೈನಿನಲ್ಲಿರುವ ಸಿಂಗಪೆರುಮಾಳ್‌ಕೋವಿಲ್ ವಾಸಸ್ಥರು.

ಹಿಟ್ಲರಿನ ಅನಚರರೇ ಅವನಿಗೆ ಎದುರು ಬಿದ್ದು ಅವನನ್ನು ಅಧೋಗತಿಯ ಪಾಲುಮಾಡುವರೆಂದು ಒಬ್ಬ ಯಹೂದ್ಯನು ತನ್ನ ಗ್ರಂಥದಲ್ಲಿ ಬರೆದಿರುವನು.

ಇನ್ನು ಆರು ತಿಂಗಳವರಗೆ ಯಾರೂ ಕೈಯ್ಯಲ್ಲಿ ಆಯುಧಗಳನ್ನಾಗಲಿ, ಲಾಟೀಗಳನ್ನಾಗಲಿ ಹಿಡಿದುಕೊಂಡು ಹೋಗಕೂಡದೆಂದು ಹೈದರಾಬಾದು ಸರ್ಕಾರದವರು ಆಜ್ಞೆ ಮಾಡಿರುವರು.

ನ್ಯೂಜಿಲೆಂಡು ಸೈನಿಕರು ಮರುಳ್ಗಾಡಿನಲ್ಲಿ ಒಂಟಿಗಳ ಮೇಲೆ ಪ್ರಯಾಣ ಮಾಡಲು ಸಾಧ್ಯವಾಗದೆ ತೊಂದರೆಪಡುತ್ತಿರುವರು. ಭಾರತ ಸೈನಿಕರು ತೆ ಮತ್ತೆ ಯಾವ ದೇಶದ ಸೈನಿಕರಿಗೂ ಎಲ್ಲಾ ಕಾರ್ಯಗಳನ್ನೂ ಕ್ರಮರೀತಿಯಲ್ಲಿ ನಿರ್ವಹಿಸುವದು ಕಷ್ಟವೆಂದೇ ಹೇಳಬಹುದು. ಭಾರತೀಯರ ಸಹನೆ, ಬುದ್ಧಿ, ದಯೆ ಮುಂತಾದ ಹಲವು ಉತ್ತಮ ಗುಣಗಳು ಭಾರತೀಯರ ಜನ್ಮಕ್ಕೆಂದೇ ಹೇಳಬೇಕು.

ಸಂಯುಕ್ತ ಪ್ರಾಂತ್ಯದ ವಿದ್ಯಾಶಾಖೆಯ ಡೈರೆಕ್ಟರ್ ಪವಲ್ ಪ್ರೈಸರು ಕಾಶಿಪುರದಲ್ಲಿ ಮಾಡಿದ ಉಪನ್ಯಾಸದಲ್ಲಿ ಬಾಲಕರಿಗೂ ಬಾಲಕಿಯರಿಗೂ ವಿದ್ಯಾವಿಧಾನವು ಒಂದೇ ಬಗೆಯಲ್ಲಿರಬೇಕೆಂದು ಅಭಿಪ್ರಾಯಪಟ್ಟರು. ಅಲಹಾಬಾದು ಯೂನಿವರ್ಸಿಟಿಯ ವೈಸ್ ಛಾನ್ಸಿಲರ್ ಶ್ರೀ ಅವಧ್ನಾಥ ಝಾ ರವರು ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಸೂಚಿಸಿದಾರೆ.

ಯುವಕರಿಗೆ ದೇಹಪರಿಶ್ರಮಕ್ಕೆ ಮಾರ್ಗಗಳಿರುವವಾಗಲಿ, ವಯಸ್ಸಾದವರಿಗೆ ಅವಶ್ಯಕವಾದ ವ್ಯಾಯಾಮ ಪದ್ಧತಿಯು ಇಲ್ಲವಾದುದರಿಂದ ಆ ಪದ್ಧತಿಯನ್ನು ಸರ್ದಾರ್ ಪೃಥ್ವೀಸಿಂಗ್‌ರವರು ಕಂಡು ಹಿಡಿದು ಅದನ್ನು ಆಚರಣೆಯಲ್ಲಿ ತರಲು ಯತ್ನಿಸುತ್ತಿರುವರು.

ಚಲನ ಚಿತ್ರ ತರಂಗ

ಪ್ರವಾಸ ಸಿನಿಮಾಗಳು ಮತ್ತು ವಾರ್ತಾ ಚಿತ್ರಗಳು.

(ಎಸ್. ರಾಮಕೃಷ್ಣ.)

ಇಂದು ಭಾರತವು ಅನೇಕ ಹಳ್ಳಿಗಳಿಂದ ತುಂಬಿ ಹೋಗಿದೆ. ದೊಡ್ಡ ದೊಡ್ಡ ನಗರಗಳ ಸಂಖ್ಯೆಗಳು ಬಹು ಕಡಮೆ. ಇದ್ದರೂ ಹಲ ಕೆಲವು. ಇಂತಃ ದೇಶದಲ್ಲಿ ಉತ್ತಮ ದರ್ಜೆಯ ಚಿತ್ರ ವನ್ನವನ್ನು ತಯಾರಿಸಿ ಹೆಚ್ಚು ಲಾಭಗಳಿಸುವುದು ಬಹಳ ಕಷ್ಟ. ತಯಾರಿಸಿದರೂ, ಅಂತಹ ಉತ್ತಮ ಚಿತ್ರಕ್ಕೆ ಬೆಲೆ ಸಿಗುವುದು ಪಟ್ಟಣಗಳಲ್ಲಿ ಹೊರತು ಹಳ್ಳಿಗಳಲ್ಲಿ ದೊರಕಲಾರದು. ಇದಕ್ಕೆ ಕಾರಣ ದೇಶವು ಹೀನಾವಸ್ಥೆಯಲ್ಲಿದೆ. ದೇಶದ ಜನರು ಅಧಿಕವಾಲು ಅವಿದ್ಯಾವಂತ ರೈತರು. ದೇಶದಲ್ಲಿ ಆಧಾಯ ಕಡಿಮೆ. ಹೀಗೆಲ್ಲಾ ಅನಾನುಕೂಲಗಳಿರುವುದರಿಂದ, ಮೊದಲೇ ಹೆಚ್ಚು ಲಾಭಗಳಿಸುತ್ತೆನೆಂಬ ಆಶೆಯಿಂದ ಚಿತ್ರ ತೆಗೆಯುವುದಕ್ಕೆ ಅದಕ್ಕೆ ತಕ್ಕ ಪ್ರತಿಫಲ ದೊರೆಯಲಾರದು. ಬರೀ ಲಾಭದ ಆಶೆಯಿರಬಾರದು, ದೇಶದ ಉನ್ನತಿ ಸ್ಥಿತಿಕಡೆಗೆ ಸ್ವಲ್ಪ ಗಮನ ಕೊಡಬೇಕು. ಇವೆಲ್ಲಾವನ್ನು ತಕ್ಕ ಸ್ಥಿಮಿತಕ್ಕೆ ತರಬೇಕಾದರೆ ಪ್ರವಾಸ ಸಿನಿಮಾಗಳು ವತ್ತು ಸಣ್ಣ ಸಣ್ಣ ಆಕರ್ಷಿಕ ವಾರ್ತ ಚಿತ್ರಗಳು. [ಟೂರಿರಗ್ ಟಾಕೀಸ್ ಮತ್ತು ನ್ಯೂಸ್ ರೀಲ್ಸ್]

ಮೊದಲು ಮನೆಯನ್ನು ಕಟ್ಟಬೇಕಾದರೆ ಅದಕ್ಕೆ ಅಸ್ತಿಭಾರವನ್ನು ಭದ್ರವಾಗಿ ಹಾಕಿ ಮನೆಕಟ್ಟಿದರೆ ಯಾವ ಹೆದರಿಕೆಯು ಇರುವುದಿಲ್ಲ. ಅದೇ ರೀತಿ ಈವಾಗಿನ ಭಾರತದ ಸ್ಥಿತಿಯು ಬಹಳ ಕಠಿಣಾವಸ್ಥೆಯಲ್ಲಿದೆ. ಇಂತಹ ಸ್ಥಿತಿಯಲ್ಲಿ ಉತ್ತಮ ದರ್ಜೆಯ ಚಿತ್ರವನ್ನು ತೆಗೆದು ಕೀರ್ತಿಗಳಿಸುವುದು ಕಷ್ಟ. ಈ ತರಹದ ತಯಾರಿಕೆಯು ಅಸ್ತಿಭಾರವಿಲ್ಲದ ಮನೆಯಂತಾಗುತ್ತದೆ.

ಮೊದಲು ಹೇಳಿದ ಹಾಗೆ ದೇಶದ ಅಧಿಕ ಭಾಗ ಹಳ್ಳಿಗಳಿಂದ ತುಂಬಿದೆ. ಜನರು ಸರಾಸರಿ ಹೆರಳುವುದಾದರೆ, ಅವಿದ್ಯಾವಂತರು. ಅಧಿಕವಾಗಿ ಹಳ್ಳಿಗಳಲ್ಲಿ ವಾಸಿಸುವರು. ಅವರು ಬೆಳಗಿನಿಂದ ಸಾಯಂಕಾಲದವರೆಗೆ ದುಡಿದು ಜೀವಿಸುವವರು. ಇವರಿಗೆ ಶಿಕ್ಷಣಕೊಡುವುದು ಬಹು ಕಷ್ಟ. ಇವರಿಗೆ ಸುಲಭರೀತಿಯಲ್ಲಿ ಶಿಕ್ಷಣ ಕೊಡಬೇಕು ಮತ್ತು ಕೊಟ್ಟ ಶಿಕ್ಷಣವು ಅವರ ಮನಸ್ಸಿಗೆ ಹಿಡಿಯಬೇಕು. ಈ ರೀತಿಯ ಶಿಕ್ಷಣವನ್ನು ಸಿನಿಮಾ ದ್ವಾರ ಕೊಟ್ಟರೆ ಬಹು ಮಟ್ಟಿಗೆ ಸ್ವಲ್ಪ ಉತ್ತಮ ಸ್ಥಿತಿಗೆ ತಂಬಹುದು.

ಅದು ಹೇಗೆಂದರೆ ವೈದಲು, ವಿದ್ಯಾವಂತರು. ಹಣವಂತರು. ಸರ್ಕಾರದವರು, ದೇಶದ ಏಳಿಗೆಯ ದೃಷ್ಟಿಯಿಟ್ಟುಕೊಂಡು ಮುಂದೆ ಬರಬೇಕು. ಮೊದಲು ಶುರುವಿನಲ್ಲಿ ಮಾಯದ್ವೀಪ್, ಮ್ಯಾಜಿಕ್ ಲ್ಯಾಟರನ್ ಮುಖಾಂತರ ಹಳ್ಳಿಯವರಿಗೆ ಪುಕಸಟ್ಟೆ, ಅವರ ಜೀವನಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ಅದನ್ನು ಬದಲಾಯಿಸಿ ಹೊಸ ಮಾರ್ಗಕ್ಕೆ ಇಳಿಯುವ ಉಪಾಯಗಳನ್ನು ಸಣ್ಣ ಸಣ್ಣ ನ್ಯೂಸ್ ರೀಲ್ಸ್‌ಗಳ ಮುಖಾಂತರ ತೋರಿಸಬೇಕು. ಈ ರೀತಿ ಕ್ರಮ ಕ್ರಮೇಣ ಅವರಿಗೆ ಆರೋಗ್ಯಶಾಸ್ತ್ರ, ಚರಿತ್ರೆ, ಭೂಗೋಳ ವಿಜ್ಞಾನ ಮತ್ತು ಅವರ ಜೀವನಕ್ಕೆ ಸಂಬಂಧಪಟ್ಟ ಚಿತ್ರಗಳು, ಭೂಮಿಯನ್ನು ಹೊಸ ಹೊಸ ರೀತಿಯಲ್ಲಿ ಉತ್ತಿ, ಹೆಚ್ಚು ಹೆಚ್ಚು ಫಸಲನ್ನು ಹೊಂದುವ ಹೊಸ ಹೊಸ ಆಧುನಿಕ ಮಾರ್ಗಗಳು, ಮತ್ತು ಆಧುನಿಕ ಸಲಕರಣೆಗಳ ಚಿತ್ರಗಳನ್ನು ತೋರಿಸಿ ಅವರ ಜೀವನದಲ್ಲಿ ಒಂದು ಹೊಸ ಸ್ಫೂರ್ತಿಯನ್ನು ಹುಟ್ಟಿಸ ಬಹುದು. ಅದುದರಿಂದ ಹೊಸ ಹೊಸ ನ್ಯೂಸ್ ರೀಲ್ಸ್‌ಗಳು ವಿದ್ಯಾಭ್ಯಾಸ ರುಚಿಯಿಂದ ಹೆಚ್ಚು ಲಾಭದಾಯಕವಾಗುತ್ತದೆ. ಪ್ರವಾಸ ಸಿನಿಮಾಗಳು (ಟೂರಿಂಗ್ ಟಾಕೀಸ್) ಮತ್ತು ನ್ಯೂಸ್ ರೀಲ್ಸ್‌ಗಳು ಹೆಚ್ಚಿದಂತೆಲ್ಲಾ, ಈ ಕೈಗಾರಿಕೆಗೆ ಹೆಚ್ಚು ಗಟ್ಟಿಯ ಅಸ್ತಿಭಾರವನ್ನು ಹಾಕಿದಂತಾಗುತ್ತದೆ. ಆದ್ದರಿಂದ ಇವಕ್ಕೆ ಹೆಚ್ಚು ಗಮನವನ್ನು ಕೊಟ್ಟರೆ ಬಹಳಲಾಭವಿದೆಯೆಂಬುವುದರಲ್ಲಿ ಯಾವ ಸಂಶಯವು ಇಲ್ಲ.

ಬೊಂಬಿ ಟಾಕೀಸ್ ರವರ ಆಜಾದ್ ಚಿತ್ರವು ಮಾರ್ಚಿ ೯ ನೇ ತಾ|| ಏಡನ್ನಿನಲ್ಲಿ ಪ್ರದರ್ಶಿತ ಲಾಯಿತು. ಭಾರತದಿಂದ ಪ್ರಸಿದ್ಧ ಚಿತ್ರ ಕಂಪನಿಯ ಚಿತ್ರಗಳಲ್ಲಿ ಹೊರ ದೇಶದಲ್ಲಿ ಪ್ರದರ್ಶಿತವಾದುದರಲ್ಲಿ ಇದು ಮೊದಲನೆಯದು.

ಬರ್ನಾರ್ಡ್ ಷಾರವರು ತಮ್ಮ ಮೂರು ನಾಟಕಗಳನ್ನು ಚಲನ ಚಿತ ದಲ್ಲಿ ತಯಾರಿಸಲು ಅನುಮತಿಯಿತ್ತಿರುವರು.

ಶಾಂತಾಪ್ಟೆ ಬರುವ ಮೇ ತಿಂಗಳಲ್ಲಿ ಮದ್ರಾಸಿಗೆ ತೆರಳುವಳು. ತಮಿಳುಭಾಷೆಯ ಚಿತ್ರದಲ್ಲಿ ಅಭಿನಯಿಸುವಳು. ವೈ. ವಿ. ರಾವ್ ರವರು ನಿರ್ದೇಶಕರಾಗಬಹುದು.

ಶಿಲಾರಿಷ್ಟ

ಕಲ್ಲೊತ್ತು ಮತ್ತು ಹುಳುಕಡ್ಡಿಗೆ
ಸಿದ್ಧೌಷಧ. ಬೆಲೆ ೦-೬-೦.
ವಿಳಾಸ.— ವಿಜಯಲಕ್ಷ್ಮಿ ಸ್ಟೋರ್ಸ್
ನ್ಯೂ ಸೂರು ಬ್ಯಾಂಕ್ ರೋಡ್
ಮೈಸೂರು

ಪ್ರಪಂಚದ ನಿಜಸ್ಥಿತಿಯನ್ನು ತಿಳಿಯಬೇಕಾದರೆ
* ರಾಜಕೀಯ ಪರಿಸ್ಥಿತಿಗಳು *
* ಸಾಮಾಜಿಕ ಸುಧಾರಣೆಗಳು *
* ದೇಶವಿದೇಶ ವರ್ತಮಾನಗಳು *
* ಚಿತ್ರವಿಚಿತ್ರ ವಾರ್ತಾವಳಿಗಳು *
ಇವೆಲ್ಲ ವಿಷಯಗಳ ಕುರಿತು ತಿಳಿಯಬೇಕಾದರೆ,
ಇಡೀ ಕರ್ನಾಟಕದ ಹೊರ-ಒಳ ಭಾಗಗಳಲ್ಲಿ
ಎಲ್ಲಾ ತರದ ಜನರಿಂದಲೂ ಆದರಿಸಲ್ಪಡುತ್ತಿರುವ
"ನವಸಂದೇಶ" ಕ್ಕೆ
ಇಂದೇ ಚಂದಾದಾರರಾಗಿರಿ.
ಅಂಚೇವೆಚ್ಚ ಸೇರಿ ರೂ. ೩-೮-೦
ಹೆಚ್ಚಿನ ವಿಷಯಗಳಿಗೆ ಮ್ಯಾನೇಜರಿಗೆ ಬರೆಯಿರಿ—
ನವಸಂದೇಶ ಕಾರ್ಯಾಲಯ, ಬಳ್ಳಾರಿ

ಸೋಜಿಗದ ಸುದ್ದಿ.



ಹೊಸತರಹದ ನಮೂನೆಗಳೂ, ಅತ್ಯಂತ ಸುಂದರವಾದ ಈಗಿನ ಕಾಲಕ್ಕೆ ತಕ್ಕಂತೆ ಇದೆ. ಗಟ್ಟಿಯಾದ ಯಂತ್ರ, ಸರಿಯಾದ ಕಾಲ ತೋರಿಸುತ್ತೆ, 5 ವರ್ಷ ಗ್ಯಾರಂಟಿವುಳ್ಳದ್ದು, ರೋಲ್ಡ್ ಗೋಲ್ಡ್ ಪ್ಲೇಟೆಡ್ ಗುಂಡಾದ ಅಥವಾ ಚಾಕ್ ನಮೂನೆಯೂ ಬೆಲೆ 2-10-0. ಉತ್ತಮವಾದ್ದು 3-8-0. ಚಾಜೀತವಾದ ಗಡಿಯಾರ 6-8-0. ಉತ್ತಮವಾದದ್ದು 8-8-0. ಅತಿ ಒಳ್ಳೆಯ ತರಹದ್ದು 10 ರೂ. ಪ್ಯಾಕಿಂಗ್ ಪೋಸ್ಟ್ ಖರ್ಚು 10 ಆಣೆ. 3 ಗಡಿಯಾರ ಒಟ್ಟಿಗೆ ತರಿಸಿದರೆ ಪೋಸು ಖರ್ಚು ಉಚಿತ.

Empress Trading Company
Post Box No, 6744 CALCUTTA

VAIDYARATNAM
P. S. Varier's
Arya Vaidya Sala
Kottakkal
Branches - Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidya ratnam vsits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthful ness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala,
KOTTAKAL (S.Malabar)

The Satyavadi Limited

(Incorporated in Mysore State)
MYSORE
A few shares of Rs. 5 are available

Edited, Printed & published by M .S. Krishna Rao, at the Satyavadi Press, ChamarajAgrahar, Mysore

ಮೆಜಿಸ್ಟಿಕ್ ಕನಡ ಕಾಂಪಿಟಿಷನ್ ನಂ. ೫

೭೫ ರೂ. ಬಹುಮಾನ: ೪೦ ರೂ. ಮೊದಲನೆಬಹುಮಾನ: ೩೫ ರೂ. ಇತರ ಬಹುಮಾನ

ಈ ಸ್ಪರ್ಧೆಯ ಪ್ರವೇಶಧನ ಪ್ರತಿ ಉತ್ತರಕ್ಕೂ (0–4–0) ನಾಲ್ಕಾಣೆಗಳು. ಒಂದು ರೂಪಾಯಿಗೆ 5 ಉತ್ತರಗಳು. ಪ್ರತಿಯೊಬ್ಬರೂ 2 ಉತ್ತರಗಳಿಗೆ ಕಡಿಮೆಯಿಲ್ಲದಂತೆ ಎಷ್ಟು ಉತ್ತರವನ್ನಾದರೂ ಕಳುಹಿಸಬಹುದು. ಬಹುಮಾನಕ್ಕೆ ಯೋಗ್ಯವಾದ ಎಲ್ಲಾ ಉತ್ತರಕ್ಕೂ ಒಹುಮಾನಗಳನ್ನು ಕೊಡಲಾಗುವುದು. ‡ ಪ್ರತಿಯೊಂದು ಪ್ರಶ್ನೆಗೂ ಸರಿಯಾಗಒಹುದಾದ 2 ಉತ್ತರಗಳನ್ನು ನಾವೇ ಸೂಚಿಸಿರುತ್ತೇವೆ. ಮೊದಲನಿಯದಕ್ಕೆ (ಎ) ಎಂದೂ ಎರಡನೆಯದಕ್ಕೆ (ಬಿ) ಎಂದೂ ಸಂಜ್ಞೆ ಇಟ್ಟುಕೊಳ್ಳಿರಿ. ನೀವು ಉತ್ತರಗಳನ್ನು ಬರೆಯುವಾಗ ಫಾರಂನಲ್ಲಿ ನೀವು ತೀರ್ಮಾನಿಸತಕ್ಕ ಉತ್ತರದ ಸಂಜ್ಞಾಕ್ಷರಗಳಾದ ಎ ಅಥವಾ ಬಿ ಎಂಬುದನ್ನು ಮಾತ್ರ ಬರೆಯಿರಿ.

ಉತ್ತರಗಳನ್ನು ಕಳುಹಿಸಲು 20–4–40 ಕೊನೆಯದಿನ. 22 ನೇ ತಾರೀಖಿನ ನಂತರ ತಲಪುವ ಉತ್ತರಗಳನ್ನು ತಿರಸ್ಕರಿಸಲಾಗುತ್ತೆ. ಸರಿಯಾದ ಉತ್ತರವು 24–4–40 ರ ಸತ್ಯವಾದಿಯಲ್ಲಿ ಪ್ರಕಟಿಸಲಾಗುತ್ತೆ

ಪೋಸ್ಟಿನಲ್ಲಿ ಆಗತಕ್ಕ ನಿಧಾನಕ್ಕಾಗಲೀ ಅಥವಾ ಗೈರ್‌ಏಲೆಗಾಗಲೀ ನಾವು ಜವಾಬ್ದಾರರಲ್ಲ. 3. ಸೀಲ್‌ಮಾಡಿಟ್ಟಿರತಕ್ಕ ಎಡಿಟರವರ ಉತ್ತರಕ್ಕೆ ಸರಿಹೋಲುವ ಉತ್ತರಗಳಿಗೆ ಮೊದಲನೇ ಬಹುಮಾನವೂ ಒಂದು ಎರಡು ತಪ್ಪಿನ ಉತ್ತರಗಳಿಗೆ ಇತರ ಬಹುಮಾನವೂ ಕೊಡಲ್ಪಡುವುದು. ಬಹುಮಾನಗಳನ್ನು ಹಂಚತಕ್ಕ ವಿಚಾರವು ಕಾಂಪಿಟಿಷನ್ ಎಡಿಟರಿಗೆ ಸೇರಿದ್ದು.

ವಿಳಾಸ :—ಮೆಜಿಸ್ಟಿಕ್ ಕಾಂಪೆಟಿಷನ್ C/o ಶ್ರೀ ವಿಜಯಲಕ್ಷ್ಮೀ ಸ್ಟೋರ್ಸ್, ಮೈಸೂರು ಬ್ಯಾಂಕ್ ರೋಡ್, ಮೈಸೂರು. [ನಮ್ಮ ಏಜೆಂಟರು :—ಮುಖಿ ಹೆಚ್. ಕೆ. ಮೂರ್ತಿ, ಕೆಂಗಿನ ಕಾಯಿ ವ್ಯಾಪಾರಿಗಳು ನ್ಯೂಮಾರ್ಕೆಟ್, ಬೆಂಗಳೂರು ಸಿಟಿ.

ಪ್ರಶ್ನೆ	ಉತ್ತರಗಳು									
	1	2	3	4	5	6	7	8	9	10
1										
2										
3										
4										
5										
6										
7										
8										
9										
10										
11										
12										

ಹೆಸರು ..... ವಿಳಾಸ ..... ನಂ. ..... ಸೈ.

ಪ್ರಶ್ನೆಗಳು:—

1. ಮಹಾತ್ಮರ ಇದು ಲೋಕ ಪ್ರಸಿದ್ಧವಾದದ್ದು (ಎ) ತಾಳ್ಮೆ (ಬಿ) ಜಾಣ್ಮೆ
2. ರಸಿಕರಾದ ಯುವಕರು ಸುಂದರವಾದ....ಏಗಾಗಿ ತುಂಬಾ ಹುಡುಕುತ್ತಾರೆ(ಎ)ವಧು(ಬಿ)ವರ
3. .....ವಿರುವವರೆಗೂ ಹೊಡೆದಾಡುವುದು ಯೋಧನ ಲಕ್ಷಣ (ಎ) ತಾರ್ಣ (ಬಿ) ಪ್ರಾಣ
4. ಬಹುಜನರ ಇದಕ್ಕೆ ವಿರೋಧವಾಗಿ ನಡೆಯಬಾರದು (ಎ) ಮತ (ಬಿ) ಹಿತ
5. ——— ಇಲ್ಲದ ಕೆಲಸವು ಕೆಡುವುದು (ಎ) ಪ್ರೀತಿ (ಬಿ) ರೀತಿ
6. ಇದು ಮನುಷ್ಯನ ಒಂದು ಗುಣವನ್ನು ತಿಳಿಸುವುದು (ಎ) ಬಿಂಕ (ಬಿ) ಮಂಕು
7. .....ಗಾರಿಕೆಯು ಜನರ ಜೀವನವನ್ನು ಹಾಳುಮಾಡುವುದು (ಎ) ದುಂದು (ಬಿ) ಜೂಜು
8. ಕೆಟ್ಟ ಇದರಿಂದ ಕೆಲವರು ಕೆಟ್ಟಿದ್ದಾರೆ (ಎ) ಚಟ (ಬಿ) ಹಟ
9. ಕೆಲವರು ರಸವಿಲ್ಲದ ಇದನ್ನು ರಚಿಸುತ್ತಾರೆ (ಎ) ಗದ್ಯ (ಬಿ) ಪದ್ಯ
10. ಇಂತಹ ಭೂಮಿಯಲ್ಲಿ ಚೆನ್ನಾಗಿ ಬೆಳೆಯಾಗುವುದಿಲ್ಲ (ಎ) ಕೀಳು (ಬಿ) ಬೀಳು
11. ಕೆಲವರು ಇದಕ್ಕಾಗಿ ದೇವರನ್ನು ಧ್ಯಾನಿಸುತ್ತಾರೆ (ಎ) ಭುಕ್ತಿ (ಬಿ) ಮುಕ್ತಿ
12. ಅನೇಕವೇಳೆ ಇದರಿಂದ ಕುಕಾಡೆಗಿರುವುದು (ಎ) ಸಿಟ್ಟು (ಬಿ) ಗುಟ್ಟು